| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ<br>ನಾಯಿ ಬಾಲ ಜಗ್ಗಿದ | ಪ್ರಾಸ, ಪದ್ಯ, ಹಾಡು ಮತ್ತು ಸರಳ ಕಥೆಗಳನ್ನು ಓದುವುದು. | | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ಹಿಂದಿನ ಅವಧಿಯಲ್ಲಿ ಹೇಳಿಕೊಟ್ಟ ದೀಪದ ಹಾಡನ್ನು ಅಭಿನಯ ಪೂರ್ವಕವಾಗಿ ಹೇಳಿಕೊಡುವರು. | ಕನ್ನಡ<br>ಬುದ್ಧಿವಂತ ಮಂತ್ರಿ | * ಸರಿಯಾದ ರೂಪ ಅನುಕ್ರಮದೊಂದಿಗೆ ಅಕ್ಷರ ಹಾಗೂ ಪದಗಳ ನಡುವೆ ಸೂಕ್ತ ಜಾಗದೊಂದಿಗೆ ಬರೆಯುವುದು.<br>* ಪದಗಳ ನಡುವೆ ಇರುವ ಅರ್ಥಪೂರ್ಣ ಸಂಬಂಧವನ್ನು ಅರಿಯುವುದು. | | | 2ನೇ ತರಗತಿಯ ಮಕ್ಕಳ ಚಟುವಟಿಕೆಯಲ್ಲಿಯೇ 3ನೇ ತರಗತಿಯ ಮಕ್ಕಳನ್ನು ತೊಡಗಿಸಿಕೊಳ್ಳುವರು. |
| | 5 ನಿ | | | | | ನೇರ ಬೋಧನೆಗೆ ಅಣಿಯಾಗುವರು. | | | | | ಶಿಕ್ಷಕರು, ಮಕ್ಕಳಿಗೆ ತಿಳಿದಿರುವ ಸಣ್ಣ ಕಥೆಯೊಂದನ್ನು ಬರೆಯಲು ತಿಳಿಸುವರು. |
| | 25 ನಿ | | | | ಹಿರೇಮಣಿ | **ಕಲಿಕಾಂಶ ಚಟುವಟಿಕೆ :** ಶಿಕ್ಷಕರು ಹಿಂದಿನ ಕನ್ನಡ ತರಗತಿಯಲ್ಲಿ ಹೇಳಿಕೊಟ್ಟ ಪ್ರಾಸಗೀತೆಯನ್ನು ಮಕ್ಕಳಿಂದ ಸಾಮೂಹಿಕವಾಗಿ ಹೇಳಿಸುವುದು ಪಠ್ಯದಲ್ಲಿನ ಪದ್ಯವನ್ನು ಶಿಕ್ಷಕರು ರಾಗವಾಗಿ ಹಾಡಿ ಮಕ್ಕಳಿಗೆ ಹೇಳಿಕೊಡುವರು. | | | | ಹಿ<br>ಸ್ವಯಂ<br>ಕಲಿಕೆ | ಹಿರೇಮಣಿ ಸಹಾಯದಿಂದ ಮಕ್ಕಳು ತಮ್ಮ ನೋಟ್ ಪುಸ್ತಕದಲ್ಲಿ ತಮಗೆ ತಿಳಿದ ಕಥೆಯನ್ನು ಬರೆಯುವರು. |
| | 10 ನಿ | | | | | ಶಿಕ್ಷಕರು ಮಕ್ಕಳಿಗೆ, ಪಠ್ಯದಲ್ಲಿನ ಪದ್ಯವನ್ನು ನಕಲು ಮಾಡಲು ತಿಳಿಸುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲನೆ ಮಾಡುವರು. |
| | 25 ನಿ | | | | ಸ್ವಯಂ<br>ಕಲಿಕೆ | ಶಿಕ್ಷಕರ ಸೂಚನೆಯಂತೆ ಹಿರೇಮಣಿಯು ಎಲ್ಲಾ ಮಕ್ಕಳಿಗೂ ಪದ್ಯವನ್ನು ನಕಲು ಮಾಡಿಸುವನು. | | | | ಶಿಕ್ಷಕ | **ಮೌಲ್ಯಮಾಪನ :**<br>ಮಕ್ಕಳು ತಾವು ಬರೆದ ಕಥೆಯನ್ನು ಸರಿಯಾದ ಏರಿಳಿತದಲ್ಲಿ ಹೇಳುವ ಸ್ಪರ್ಧೆಯನ್ನು ಮಾಡಿ ಕಥೆಯನ್ನು ಹೇಳಿಸುವುದು. ಹೇಳುವಾಗ ಆಗುವ ತಪ್ಪುಗಳನ್ನು ತಿದ್ದಿ ಮಾರ್ಗದರ್ಶನ ಮಾಡುವರು |
| | 5 ನಿ | | | | | ಮೇಲಿನ ಚಟುವಟಿಕೆಗಳನ್ನು ಪರಿಶೀಲಿಸುವರು. | | | | | ಮೇಲಿನ ಚಟುವಟಿಕೆಯನ್ನು ಮುಂದುವರೆಸುವರು. |
| 2ನೇ | 10 ನಿ | ಗಣಿತ<br>ಸಂಖ್ಯೆಗಳು | ಚಿಕ್ಕದು, ದೊಡ್ಡದು, ಅತ್ಯಂತ ದೊಡ್ಡದು, ಹಿಂದಿನ, ಮುಂದಿನ, ಮಧ್ಯದ ಸಂಖ್ಯೆಗಳನ್ನು ಗುರ್ತಿಸುವುದು. | ಗೋಲಿಗಳು, ನಾಣ್ಯಗಳು, ಖಾಲಿ ಬೆಂಕಿ ಪೊಟ್ಟಣಗಳು, ಮಿಂಚುಪಟ್ಟಿ, ಕಡ್ಡಿಗಳು, ಕಪ್ಪುಹಲಗೆ. | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ಒಂದು ಒಂದು ಎರಡು ನನಗೆ ಕಣ್ಣುಗಳೆರಡು<br>ಎರಡು ಒಂದು ಮೂರು ದಾಸಯ್ಯನ ನಾಮಗಳು<br>ಮೂರು ಒಂದು ನಾಲ್ಕು ಹಸುವಿಗೆ ಕಾಲುಗಳು ನಾಲ್ಕು<br>ನಾಲ್ಕು ಒಂದು ಐದು ಕೈಯ ಬೆರಳುಗಳು ಐದು<br>ಐದು ಒಂದು ಆರು ಜಿರಳೆಗೆ ಕಾಲು ಆರು<br>ಆರು ಒಂದು ಏಳು ವಾರಕೆ ದಿನಗಳು ಏಳು<br>ಏಳು ಒಂದು ಎಂಟು ದಿಕ್ಕುಗಳು ಎಂಟು<br>ಎಂಟು ಒಂದು ಒಂಭತ್ತು<br>ಗ್ರಹಗಳು ಇರುವುದು ಒಂಭತ್ತು.<br>ಒಂಭತ್ತು ಒಂದು ಹತ್ತು ರಾವಣನ ತಲೆಗಳು ಹತ್ತು. | ಗಣಿತ<br>ಪೂರ್ಣಾಂಕಗಳು ಮತ್ತು ಸಂಖ್ಯಾವಾಚಕಗಳು | * 1ರಿಂದ 99ರವರೆಗಿನ ಸಂಖ್ಯೆಗಳನ್ನು ಹೆಚ್ಚು (>) ಕಡಿಮೆ (<) ಮತ್ತು ಸಮ (=) ಚಿಹ್ನೆಗಳನ್ನು ಹೋಲಿಸುವುದು. | ಗೋಲಿಗಳು, ನಾಣ್ಯಗಳು, ಖಾಲಿ ಬೆಂಕಿ ಪೊಟ್ಟಣಗಳು, ಮಿಂಚುಪಟ್ಟಿ, ಕಡ್ಡಿಗಳು, ಕಪ್ಪುಹಲಗೆ. | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ಎರಡನೇ ತರಗತಿ ಮಕ್ಕಳ ಜೊತೆಯಲ್ಲಿಯೇ ಇವರನ್ನೂ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವರು. |
| | 5 ನಿ | | | | | ಹಿಂದಿನ ಅವಧಿಯ ಚಟುವಟಿಕೆಯನ್ನು ಮುಂದುವರಿಸಿಕೊಂಡು ಹೋಗಲು ಹಿರೇಮಣಿಗೆ ಸೂಚಿಸುವರು. | | | | | ಮಕ್ಕಳು ಮುಂದಿನ ಚಟುವಟಿಕೆಗೆ ಅಣಿಯಾಗುವರು. |
| | 25 ನಿ | | | | ಹಿರೇ<br>ಮಣಿ | ಶಿಕ್ಷಕರ ಸೂಚನೆಯಂತೆ ಮಕ್ಕಳು ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | | | | ಶಿಕ್ಷಕ | **ಮೌಲ್ಯಮಾಪನ ಚಟುವಟಿಕೆ :** ಪ.ಪು.ಪು.ಸಂ. 35ರಲ್ಲಿರುವ "ಮಾದರಿ ಯಂತೆ ಹೇಳಿಕೆ ರೂಪದಲ್ಲಿ ಬರೆ" ಈ ಚಟುವಟಿಕೆಯನ್ನು ಮಾಡಿಸುವರು. |
| | 5 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲನೆ ಮಾಡಿ ಮಾರ್ಗದರ್ಶನ ನೀಡುವರು. | | | | | ಮಕ್ಕಳು ಮುಂದಿನ ಚಟುವಟಿಕೆಗೆ ಅಣಿಯಾಗುವರು. |
| | 35 ನಿ | | | | ಶಿಕ್ಷಕ | **ಪುನರಾವರ್ತನೆ ಅಭ್ಯಾಸ :** ಒಂದು ಬಾಕ್ಸ್‌ನಲ್ಲಿ ಪ್ರತಿ ಮಗುವಿಗೂ ಎರಡೆರಡು ಚೀಟಿ ಬರುವಂತೆ ಚೀಟಿಗಳಲ್ಲಿ ಸಂಖ್ಯೆಗಳನ್ನು ಬರೆದು ಸುರುಳಿ ಸುತ್ತಿ ಹಾಕುವುದು. ಪ್ರತಿ ಮಗುವಿಗೆ ಎರಡೆರಡು ಚೀಟಿ ಎತ್ತಿಕೊಂಡು ಅದರಲ್ಲಿರುವ ಸಂಖ್ಯೆ ಓದಿ ಅದರಲ್ಲಿ ಯಾವುದು ದೊಡ್ಡದು, ಯಾವುದು ಚಿಕ್ಕದು ಎಂದು ಹೇಳಬೇಕು. | | | | ಶಿಕ್ಷಕ | **ಪುನರಾವರ್ತನೆ ಅಭ್ಯಾಸ :** 2ನೇ ತರಗತಿಯ ಮಕ್ಕಳಿಗೆ ಮಾಡಿಸಿದ ಚಟುವಟಿಕೆ ಯಲ್ಲಿ ಈ ಮಕ್ಕಳನ್ನೂ ಸೇರಿಸಿಕೊಂಡು ಚಟುವಟಿಕೆ ಮಾಡಿಸುವುದು. ಆದರೆ ಅವರು ಆರಿಸಿಕೊಂಡ ಚೀಟಿಯಲ್ಲಿನ ಸಂಖ್ಯೆಗಳನ್ನು <, >, = ಚಿಹ್ನೆ ಬಳಸಿ ಕಪ್ಪು ಹಲಗೆಯ ಮೇಲೆ ಬರೆಯಲು ಸೂಚಿಸುವರು. |
| | | | | | | **ಸೂಚನೆ :** 35ನಿ. ಉಳಿದಿದ್ದರಿಂದ ಎರಡೂ ತರಗತಿಗಳನ್ನು ಒಟ್ಟಿಗೇ ಸೇರಿಸಿಕೊಂಡು ಈ ಚಟುವಟಿಕೆಯನ್ನು ಮಾಡಿಸಲು ಸೂಚಿಸಿದೆ. | | | | | |

**26ನೇ ದಿನ**



| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ<br>ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಮೂರನೇ ತರಗತಿ<br>ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| 03 | 10 ನಿ | ಜೀವನ ವಿಜ್ಞಾನ | ಮಾನಸಿಕ ವಿಕಸನ (ಧ್ಯಾನ) | ಜಮಖಾನಗಳು | ಶಿಕ್ಷಕ | ಹಿಂದಿನ ತರಗತಿಯಲ್ಲಿ ಧ್ಯಾನವನ್ನು ಹೇಳಿಕೊಟ್ಟಂತೆ ಮನಸ್ಸನ್ನು ಶಾಂತ ಗೊಳಿಸಲು, ಚಿನ್ಮುದ್ರೆ ಪರಿಚಯಿಸಿ ಧ್ಯಾನದ ಅಭ್ಯಾಸ ಮಾಡಿಸುವರು. | ಜೀವನ ವಿಜ್ಞಾನ | ಮಾನಸಿಕ ವಿಕಸನ (ಧ್ಯಾನ) | ಜಮಖಾನ | ಶಿಕ್ಷಕ | ಹಿಂದಿನ ತರಗತಿಯಲ್ಲಿ ಧ್ಯಾನವನ್ನು ಹೇಳಿಕೊಟ್ಟಂತೆ ಮನಸ್ಸನ್ನು ಶಾಂತ ಗೊಳಿಸಲು ಚಿನ್ಮುದ್ರೆ ಪರಿಚಯಿಸಿ ಧ್ಯಾನದ ಅಭ್ಯಾಸ ಮಾಡಿಸುವರು. |
| | 30 | | | | | <u>**ಪ್ರಾರ್ಥನಾ ಗೀತೆ :**</u><br>ಸ್ವಾಮಿ ದೇವನೆ ಲೋಕ ಪಾಲನೆ,<br>ತೇನಮೋಸ್ತು, ನಮೋಸ್ತುತೆ .....<br>....................................<br>....................................<br><u>**ಸೂಚನೆ :**</u> ಶಿಕ್ಷಕರಿಗೆ ಗೊತ್ತಿರುವ ಪ್ರಾರ್ಥನಾ ಗೀತೆಯೊಂದನ್ನು ರಾಗಬದ್ಧ ವಾಗಿ ಹೇಳಿಸಿ ಅಭ್ಯಾಸ ಮಾಡಿಸುವರು. | | | | | <u>**ಪ್ರಾರ್ಥನಾ ಗೀತೆ :**</u><br>ಸ್ವಾಮಿ ದೇವನೆ ಲೋಕ ಪಾಲನೆ<br>ತೇನಮೋಸ್ತು, ನಮೋಸ್ತುತೆ .....<br>....................................<br>....................................<br><u>**ಸೂಚನೆ :**</u> ಶಿಕ್ಷಕರಿಗೆ ಗೊತ್ತಿರುವ ಪ್ರಾರ್ಥನಾ ಗೀತೆಯೊಂದನ್ನು ರಾಗಬದ್ಧ ವಾಗಿ ಹೇಳಿಸಿ ಅಭ್ಯಾಸ ಮಾಡಿಸುವರು. |
| | 40 ನಿಮಿಷ | ಚಿನ್ನರ ಚುಕ್ಕಿ | ರೇಡಿಯೋ ಕಪ್ಪುಹಲಗೆ ಸೀಮೆ ಸುಣ್ಣ | | ಶಿಕ್ಷಕ | ಪ್ರಸಾರ ಪೂರ್ವದಲ್ಲಿ ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸುವುದು. ಎಲ್ಲಾ ಮಕ್ಕಳಿಗೂ ಕೇಳಿಸುವಂತೆ ರೇಡಿಯೋವನ್ನೂ ಇಡುವುದು ಹಾಗೂ ಆಲಿಸುವಂತೆ ಅಣಿಗೊಳಿಸುವರು.<br>ಪ್ರಸಾರ ಸಮಯದಲ್ಲಿ ಎಲ್ಲಾ ಮಕ್ಕಳು ಆಲಿಸುತ್ತಾ ಎಲ್ಲರೂ ಭಾಗವಹಿಸುತ್ತಾರೆಯೇ ಎಂದು ಗಮನಿಸುವರು.<br>ಪ್ರಸಾರೋತ್ತರವಾಗಿ ರೇಡಿಯೋ ಕಾರ್ಯಕ್ರಮದಲ್ಲಿ ಬರುವ ಪ್ರಶ್ನೆಗಳಿಗೆ ಉತ್ತರಿಸಿ ದಾಖಲಿಸುವರು. | ಚಿನ್ನರ ಚುಕ್ಕಿ | | ರೇಡಿಯೋ, ಕಪ್ಪುಹಲಗೆ, ಸೀಮೆ ಸುಣ್ಣ | ಶಿಕ್ಷಕ | ಪ್ರಸಾರ ಪೂರ್ವದಲ್ಲಿ ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸುವುದು. ಎಲ್ಲಾ ಮಕ್ಕಳಿಗೂ ಕೇಳಿಸುವಂತೆ ರೇಡಿಯೋವನ್ನು ಇಡುವುದು ಹಾಗೂ ಆಲಿಸುವಂತೆ ಅಣಿಗೊಳಿಸುವರು.<br>ಪ್ರಸಾರ ಸಮಯದಲ್ಲಿ ಎಲ್ಲಾ ಮಕ್ಕಳು ಆಲಿಸುತ್ತಾ ಎಲ್ಲರೂ ಭಾಗವಹಿಸಿರುತ್ತಾರೆಯೇ ಎಂದು ಗಮನಿಸುವರು.<br>ಪ್ರಸಾರೋತ್ತರವಾಗಿ ರೇಡಿಯೋ ಕಾರ್ಯಕ್ರಮದಲ್ಲಿ ಬರುವ ಪ್ರಶ್ನೆಗಳಿಗೆ ಉತ್ತರಿಸಿ ದಾಖಲಿಸಲು ಮಾರ್ಗದರ್ಶನ ಮಾಡುವರು. |
| 4 | 10 ನಿ | ಪ.ಅ<br>ಹೊರಸಂಚಾರ | ಪ್ರಕೃತಿಯ ಸೌಂದರ್ಯವನ್ನು ಮೆಚ್ಚುವರು ಬೇರೆ ಬೇರೆ ಪ್ರಾಣಿಗಳ ಮನೆಗಳನ್ನು ಗುರ್ತಿಸುವರು. | ಪರಿಸರ ಮಕ್ಕಳು | ಶಿಕ್ಷಕ | <u>**ಪೂರ್ವ ಸಿದ್ಧತಾ ಚಟುವಟಿಕೆ :**</u><br>ಕಾವೇರಿ ತೀರದಲ್ಲಿ ಒಂದು ಕಾಡು ಅಭಿನಯ ಗೀತೆಯನ್ನು ಹಾಡಿಸುವರು. | ಪರಿಸರ ಅಧ್ಯಯನ<br>ಪ್ರಾಣಿ ಪ್ರಪಂಚ | ಪ್ರಾಣಿಗಳ ವಾಸಸ್ಥಳ, ದೇಹದ ಗಾತ್ರ, ಆಕಾರಗಳನ್ನು ಗುರುತಿಸುವುದು.<br>ಪ್ರಾಣಿಗಳ ಆಹಾರಾಭ್ಯಾಸವನ್ನು ತಿಳಿಯುವರು.<br>ಪ್ರಾಣಿಗಳ ಆಹಾರಾಭ್ಯಾಸವನ್ನು ಆಧಾರದ ಮೇಲೆ ವಿಂಗಡಿಸುವುದು.<br>ಮಾನವರಿಗೂ ಇತರ ಪ್ರಾಣಿಗಳಿಗೂ ಇರುವ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಅರಿಯುವರು. | ಪರಿಸರದಲ್ಲಿ ಮಕ್ಕಳನ್ನು ವೀಕ್ಷಿಸಲು ಸಂಚರಿಸಲು ತಿಳಿಸುವುದು | ಶಿಕ್ಷಕ | <u>**ಪೂರ್ವ ಸಿದ್ಧತಾ ಚಟುವಟಿಕೆ :**</u><br>ಕಾವೇರಿ ತೀರದಲ್ಲಿ ಒಂದು ಕಾಡು. ಅಭಿನಯ ಗೀತೆಯನ್ನು ಹಾಡಿಸುವರು. |
| | 60 ನಿ | | | | ಶಿಕ್ಷಕ | <u>**ಕಲಿಕಾಂಶ ಚಟುವಟಿಕೆ :**</u><br>ಮಕ್ಕಳನ್ನು ಹೊರ ಸಂಚಾರ ಕರೆದುಕೊಂಡು ಹೋಗುವುದು. ಅಲ್ಲೇ ಹತ್ತಿರವಿರುವ ಬೆಟ್ಟ, ಗುಡ್ಡಗಳನ್ನು ಹಾಗೂ ಪ್ರಕೃತಿ ಸೌಂದರ್ಯವನ್ನು ಸವಿಯಲು ಮಕ್ಕಳನ್ನು ಪ್ರಕೃತಿಯಲ್ಲಿ ಮುಕ್ತವಾಗಿ ಕಲಿಯಲು ಅವಕಾಶ ಕಲ್ಪಿಸುವರು. | | | | ಶಿಕ್ಷಕ | <u>**ಕಲಿಕಾಂಶ ಚಟುವಟಿಕೆ :**</u><br>ಮಕ್ಕಳನ್ನು ಹೊರಸಂಚಾರ ಕರೆದುಕೊಂಡು ಹೋಗುವುದು ಹಾಗೂ ಅಲ್ಲಿ ಕಾಣುವ ಕೆಲವು ಪ್ರಾಣಿಗಳನ್ನು ಗುರ್ತಿಸಿ ಅವುಗಳನ್ನು ಪಟ್ಟಿಮಾಡಲು ಹೇಳುವರು. |
| | 10 ನಿ | | | | ಶಿಕ್ಷಕ | ತಾವು ನೋಡಿದ ಪ್ರಕೃತಿಯ ಚಿತ್ರ ಬರೆಯಲು ಹೇಳುವರು. | | | | ಶಿಕ್ಷಕ | ಮಕ್ಕಳು ಗುರ್ತಿಸಿದ ಪ್ರಾಣಿಗಳಲ್ಲಿ ಸಾಕುಪ್ರಾಣಿಗಳ ಚಿತ್ರವನ್ನು ಬರೆಯಲು ಹೇಳುವರು.<br><u>**ಸೂಚನೆ :**</u> 2 ಮತ್ತು 3ನೇ ತರಗತಿಗಳಿಗೆ ಒಟ್ಟಾಗಿ ಬೋಧನಾ ಕಲಿಕಾ ಪ್ರಕ್ರಿಯೆ ನಡೆಯುತ್ತಿರುತ್ತದೆ. |

**27ನೇ ದಿನ**



| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ<br>ನಾಯಿ ಬಾಲ ಜಗ್ಗಿದ | ಪ್ರಾಸ ಪದ್ಯ, ಹಾಡು ಮತ್ತು ಸರಳ ಕಥೆಗಳನ್ನು ಓದುವುದು. | ಗ್ರಂಥಾಲಯದಲ್ಲಿರುವ ಪುಸ್ತಗಳು | ಶಿಕ್ಷಕ | <u>**ಪೂರ್ವ ಸಿದ್ಧತಾ ಚಟುವಟಿಕೆ :**</u> ರಂಗಕಲೆಯಲ್ಲಿ ಹೇಳಿರುವ ಪ್ರಶ್ನಾವಳಿ ಸುತ್ತಿನಲ್ಲಿ ಬರುವ ಹೌದು/ಅಲ್ಲ ಎನ್ನುವ ಉತ್ತರ ಪಡೆಯುವ ಪ್ರಶ್ನೆಗಳನ್ನು ಕೇಳುವ ಚಟುವಟಿಕೆ ಮಾಡಿಸುವರು.<br>ಶಿಕ್ಷಕರು ಮಕ್ಕಳಿಗೆ ದಪ್ಪಕ್ಷರಗಳಿರುವ ಸಣ್ಣ ಸಣ್ಣ ಕಥೆ ಪುಸ್ತಕಗಳನ್ನು ಕೊಟ್ಟು ಓದಲು ಸೂಚಿಸುವರು. | ಕನ್ನಡ<br>ನಿಯಮ ಪಾಲನೆ | ರಸ್ತೆಯ ಚಿಹ್ನೆ ಮತ್ತು ಸೂಚನೆ ಫಲಕಗಳಲ್ಲಿನ ಸರಳ ಸೂಚನೆಗಳನ್ನು ಓದುವುದು. | ಸೂಚನಾ ಫಲಕಗಳು | ಶಿಕ್ಷಕ | 2ನೇ ತರಗತಿಯ ಮಕ್ಕಳ ಚಟುವಟಿಕೆಯ ಜೊತೆಯಲ್ಲಿ 3ನೇ ತರಗತಿಯ ಮಕ್ಕಳನ್ನು ತೊಡಗಿಸಿಕೊಳ್ಳುವರು.<br>ಮಕ್ಕಳನ್ನು ನೇರ ಬೋಧನೆಗೆ ಅಣಿಗೊಳ್ಳಲು ಸೂಚಿಸುವರು. |
| | 30 ನಿ | | | | ಹಿರೇಮಣಿ | ಶಿಕ್ಷಕರ ಸೂಚನೆಯಂತೆ ಹಿರೇಮಣಿಯು ಗ್ರಂಥಾಲಯದಲ್ಲಿರುವ ಪುಸ್ತಕ ಗಳನ್ನು ಕೊಟ್ಟು ಮಕ್ಕಳಿಂದ ಓದಿಸುವರು. | | | | ಶಿಕ್ಷಕ | <u>**ಕಲಿಕಾಂಶ ಚಟುವಟಿಕೆ :**</u> ಶಿಕ್ಷಕರು ವಾಹನ ಮತ್ತು ಅಪಘಾತದ ಬಗ್ಗೆ ಮಕ್ಕಳಿಂದ ಚರ್ಚಿಸಿ ಸಂಭಾಷಣೆ ಮಾಡುವುದು ನಂತರ ಪಠ್ಯದಲ್ಲಿರುವ ಪಾಠದ ಅರ್ಧ ಭಾಗವನ್ನು ಶಿಕ್ಷಕರು ಧ್ವನಿಯ ಏರಿಳಿತದೊಂದಿಗೆ ಗಟ್ಟಿಯಾಗಿ ಓದುವರು. |
| | 10 ನಿ | | | | | ಮೇಲಿನ ಚಟುವಟಿಕೆಯನ್ನು ಶಿಕ್ಷಕರು ದೃಢಪಡಿಸಿಕೊಳ್ಳುವರು. | | | | | ಮಕ್ಕಳು ಸಾರ್ವಜನಿಕ ಸ್ಥಳಗಳಲ್ಲಿ ಗಮನಿಸಿರುವ ಸೂಚನೆಗಳನ್ನು ಬರೆಯಲು ಹಿರೇಮಣಿಗೆ ಸೂಚಿಸುವರು. |
| | 25 ನಿ | | | | ಶಿಕ್ಷಕ | <u>**ಕಲಿಕಾಂಶ ಚಟುವಟಿಕೆ :**</u> ಹಿಂದಿನ ಕನ್ನಡ ಅವಧಿಯಲ್ಲಿ ಹೇಳಿಕೊಟ್ಟ ಪ್ರಾಸ ಗೀತೆಗಳನ್ನು ಸಾಮೂಹಿಕವಾಗಿ ಹೇಳಿಸುವುದು ಮತ್ತು ಪಠ್ಯದ ಪದ್ಯವನ್ನು ಕೂಡಾ ಎಲ್ಲ ಮಕ್ಕಳಿಂದ ಸಾಮೂಹಿಕವಾಗಿ ಹೇಳಿಸುವರು. | | | | ಹಿರೇಮಣಿ | ಹಿರೇಮಣಿ ನೇತೃತ್ವದಲ್ಲಿ ಮಕ್ಕಳು ಸಾರ್ವಜನಿಕ ಸ್ಥಳಗಳಲ್ಲಿ ತಾವು ನೋಡಿರುವ ಸೂಚನೆಗಳನ್ನು ಹಿರೇಮಣಿಗೆ ಹೇಳುವರು ಮತ್ತು ನೋಟ್‌ಪುಸ್ತಕದಲ್ಲಿ ಬರೆಯುವರು.<br><u>**ಉದಾ :**</u> ಧೂಮಪಾನ ನಿಷೇಧ, ಕಂಡ ಕಂಡಲ್ಲಿ ಉಗುಳಬೇಡಿ ಇತ್ಯಾದಿ. |
| | 5 ನಿ | | | | | ಮೇಲಿನ ಚಟುವಟಿಕೆಗಳನ್ನು ಮುಂದುವರಿಸಲು ತಿಳಿಸುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸಿ ಮಾರ್ಗದರ್ಶನ ನೀಡುವರು. |
| 2ನೇ | 10 ನಿ | ಗಣಿತ : ಸಂಖ್ಯೆಗಳು | 1ರಿಂದ 99ರವರೆಗಿನ ಸಂಖ್ಯೆಗಳನ್ನು ಏರಿಕೆಕ್ರಮ, ಇಳಿಕೆ ಕ್ರಮದಲ್ಲಿ ಬರೆಯುವುದು. | ಮಿಂಚುಪಟ್ಟಿ, ಕಪ್ಪುಹಲಗೆ | ಶಿಕ್ಷಕ | <u>**ಪೂರ್ವ ಸಿದ್ಧತಾ ಚಟುವಟಿಕೆ :**</u> ಯಾವುದಪ್ಪ ಚಿಕ್ಕದು, ಯಾವುದಪ್ಪ ದೊಡ್ಡದು ಆಟ ಆಡಿಸುವರು. | ಗಣಿತ<br>ಪೂರ್ಣಾಂಕಗಳು ಮತ್ತು ಸಂಖ್ಯಾ ಸೂಚಕಗಳು | 100 ರಿಂದ 999ರ ಒಳಗಿರುವ 5 ಅಥವಾ 6 ಸಂಖ್ಯೆಗಳನ್ನು ಕ್ರಮಾಗತವಾಗಿ ಜೋಡಿಸಿ (ಏರಿಕೆಕ್ರಮ/ಇಳಿಕೆ ಕ್ರಮದಲ್ಲಿ) ಕೊಟ್ಟಾಗ ಬಿಟ್ಟು ಹೋಗಿರುವ ಸಂಖ್ಯೆಯನ್ನು ಪತ್ತೆ ಹಚ್ಚುವರು. | ಮಿಂಚುಫಲಕ, ಮೇಜು, ಸ್ಟೂಲ್, ಕಾಗದದಲ್ಲಿ ತಯಾರಿಸಿದ ಸಂಖ್ಯಾ ಬಾವುಟ | ಶಿಕ್ಷಕ | <u>**ಪೂರ್ವ ಸಿದ್ಧತಾ ಚಟುವಟಿಕೆ :**</u> 2ನೇ ತರಗತಿ ಮಕ್ಕಳ ಜೊತೆಯಲ್ಲಿ ಇವರನ್ನೂ ತೊಡಗಿಸಿಕೊಳ್ಳುವರು. |
| | 30 ನಿ | | | | ಶಿಕ್ಷಕ | <u>**ಕಲಿಕಾಂಶ ಚಟುವಟಿಕೆ :**</u> ಪ.ಪು.ದ. ಪು.ಸಂ. 42, 43 ರಲ್ಲಿರುವ ಚಟುವಟಿಕೆ - 1ರಲ್ಲಿರುವಂತೆ ಚಟುವಟಿಕೆ ಮಾಡಿಸುವರು. | | | | ಹಿರೇಮಣಿ | ಹಿಂದಿನ ಅವಧಿಯ ಚಟುವಟಿಕೆಯನ್ನು ಮುಂದುವರಿಸಿಕೊಂಡು ಹೋಗುವರು. |
| | 10 ನಿ | | | | | ಮುಂದಿನ ಚಟುವಟಿಕೆಯನ್ನು ಮುಂದುವರೆಸಿ ಕೊಂಡು ಹೋಗಲು ಶಿಕ್ಷಕರು ಹಿರೇಮಣಿಗೆ ಸೂಚಿಸುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸಿ ಮಾರ್ಗದರ್ಶನ ನೀಡುವರು. |
| | 25 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆಯನ್ನು ಹಿರೇಮಣಿಯು ಮುಂದುವರೆಸುವನು. | | | | ಶಿಕ್ಷಕ | <u>**ಕಲಿಕಾಂಶ ಚಟುವಟಿಕೆ :**</u> ಪ.ಪು.ದ. ಪು.ಸಂ. 39, 40 ರಲ್ಲಿರುವಂತೆ ಮಕ್ಕಳು, ಮಿಂಚುಫಲಕ, ಸ್ಟೂಲ್, ಸಂಖ್ಯಾ ಬಾವುಟ ಬಳಸಿ ಮಾಡಿಸುವ ಚಟುವಟಿಕೆಯನ್ನು ಮಾಡಿಸುವರು. |
| | 5 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸಿ, ಮಾರ್ಗದರ್ಶನ ನೀಡುವರು. | | | | | |

| ದಿನ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 ನಿ | ಸಾ.ಉ.ಉ.ಕಾ. ಲಲಿತಕಲೆ | ಹಳೆಯ ದಿನ ಪತ್ರಿಕೆಗಳ ಮೇಲೆ ಸ್ವಾಭಾವಿಕ ಚಿತ್ರಗಳ ರಚನೆ ಹಾಗೂ ಬಣ್ಣ ತುಂಬುವರು. | ಕಲರ್ ಪೇಪರ್, ಪೆನ್ಸಿಲ್, ಬಣ್ಣಗಳು ಹಳೆಯ ಪತ್ರಿಕೆ, ಕತ್ತರಿ | [illegible] | ಪ್ರತಿ ಭಾನುವಾರದಂದು ಬರುವ ವೃತ್ತ ಪತ್ರಿಕೆಗಳಲ್ಲಿ ಬರುವ ಪುಟಾಣಿ ಪ್ರಪಂಚ, ಬಾಲ ಪ್ರಪಂಚ, ಮಕ್ಕಳ ಚಿತ್ತಾರ ಈ ಪುಟಗಳಿಂದ ಆಯ್ದ ಚಿತ್ರಗಳನ್ನು ಕತ್ತರಿಸಿ ಸಂಗ್ರಹಿಸುವಂತೆ ತಿಳಿಸುವರು.<br>__ಉದಾ :__ ಚುಕ್ಕಿಗಳಿಂದ ಕೂಡಿದ ಸಂಖ್ಯೆಗಳನ್ನು ಗೆರೆಯ ಮೂಲಕ ಸೇರಿಸುವುದು. ಶಿಕ್ಷಕರು ಪೂರ್ವ ಸಿದ್ಧತೆಯಾಗಿ ಪ್ರಾಯೋಗಿಕವಾಗಿ ಮಾಡಿನೋಡಬೇಕು. ಮಕ್ಕಳಿಗೆ ಜೆರಾಕ್ಸ್ ಪ್ರತಿಗಳನ್ನು ನೀಡಿ ಮತ್ತು ಚಟುವಟಿಕೆ ಮಾಡಿಸುವುದು. ಸಾಧ್ಯವಾದರೆ ಬಣ್ಣಹಚ್ಚುವರು.<br>__ಉದಾ :__ ಆನೆ, ಹಸು, ಕೋಳಿ, ನರಿ ಇತ್ಯಾದಿ. | ಸಾ.ಉ.ಉ.ಕ (ಲಲಿತ ಕಲೆ) | ಹಳೆಯ ದಿನ ಪತ್ರಿಕೆಗಳ ಮೇಲೆ ಸ್ವಾಭಾವಿಕ ಚಿತ್ರಗಳ ರಚನೆ ಹಾಗೂ ಬಣ್ಣ ತುಂಬುವರು. | ಕಲರ್ ಪೇಪರ್, ಪೆನ್ಸಿಲ್, ಬಣ್ಣಗಳು ಹಳೆಯ ಪತ್ರಿಕೆ, ಕತ್ತರಿ | [illegible] | 2ನೇ ತರಗತಿ ಮಕ್ಕಳ ಜೊತೆಯಲ್ಲಿ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 40 ನಿಮಿಷ | ಚಿನ್ನರ ಚುಕ್ಕಿ | | ರೇಡಿಯೋ ಕಪ್ಪು ಹಲಗೆ ನೋಟ್ ಪುಸ್ತಕ | [illegible] | ಪ್ರಸಾರ ಪೂರ್ವದಲ್ಲಿ ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿ, ಎಲ್ಲ ಮಕ್ಕಳಿಗೂ ಕೇಳಿಸುವಂತೆ ರೇಡಿಯೋವನ್ನು ಇಡುವುದು ಮತ್ತು ಎಲ್ಲಾ ಮಕ್ಕಳು ಆಲಿಸುವಂತೆ ಅಣಿಗೊಳಿಸುವರು. ಪ್ರಸಾರ ಸಮಯದಲ್ಲಿ ಬರುವ ಕಾರ್ಯಕ್ರಮದಲ್ಲಿ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸಿರುತ್ತಾರೆ ಹಾಗೂ ಅಗತ್ಯವಾದಾಗ ಮಕ್ಕಳಿಗೆ ಸೂಚನೆ ನೀಡುವರು.<br>ಪ್ರಸಾರೋತ್ತರ ಕಾರ್ಯಕ್ರಮದಲ್ಲಿ ಬರುವಂತಹ ಪ್ರಶ್ನೆಗಳಿಗೆ ಉತ್ತರಿಸಿ ದಾಖಲಿಸುವಂತೆ ಸೂಚನೆ ನೀಡುವರು. | | ಚಿನ್ನರ ಚುಕ್ಕಿ | ರೇಡಿಯೋ, ಕಪ್ಪುಹಲಗೆ, ನೋಟ್ ಪುಸ್ತಕ | [illegible] | 2ನೇ ತರಗತಿಯಲ್ಲಿ ಸೂಚಿಸಿದ ಚಟುವಟಿಕೆಯಲ್ಲಿ ಭಾಗವಹಿಸುವರು. |
| 4ನೇ | 10 ನಿ | ಪರಿಸರ ಅಧ್ಯಯನ ಹೊರಸಂಚಾರ | ಪ್ರಕೃತಿಯ ಸೌಂದರ್ಯವನ್ನು ಮತ್ತು ಬೇರೆ ಬೇರೆ ಪ್ರಾಣಿಗಳ ಮನೆಗಳನ್ನು ಗುರುತಿಸುವರು. | ಪಠ್ಯಪುಸ್ತಕ<br>ಅಭಿನಯ ಗೀತೆಯ ಚಾರ್ಟ್ | [illegible] | __ಪೂರ್ವ ಸಿದ್ಧತಾ ಚಟುವಟಿಕೆ :__ ಕಾವೇರಿ ತೀರದಲ್ಲಿ ಒಂದು ಕಾಡು ಈ ಅಭಿನಯ ಗೀತೆಯನ್ನು ಪುನರಾವರ್ತಿಸುವರು. | ಪರಿಸರ ಅಧ್ಯಯನ ಪ್ರಾಣಿ ಪ್ರಪಂಚ | ಪ್ರಾಣಿಗಳ ವಾಸಸ್ಥಳ, ದೇಹದ ಗಾತ್ರ, ಆಕಾರಗಳನ್ನು ಗುರುತಿಸುವರು. ಪ್ರಾಣಿಗಳ ಆಹಾರಾಭ್ಯಾಸವನ್ನು ತಿಳಿಯುವರು. ಪ್ರಾಣಿಗಳ ಆಹಾರದ ಆಧಾರದ ಮೇಲೆ ವರ್ಗೀಕರಿಸುವರು.. ಮಾನವರಿಗೂ ಇತರ ಪ್ರಾಣಿಗಳಿಗೂ ಇರುವ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಅರಿಯುವರು. ಮಾನವರಿಗೂ ಇತರ ಪ್ರಾಣಿಗಳಿಗೂ ಇರುವ ಹೋಲಿಕೆ ಮತ್ತು ವ್ಯತ್ಯಾಸವನ್ನು ತಿಳಿಯುವರು. | ಪ್ರಾಣಿಗಳ ಚಿತ್ರಗಳ ಆಲ್ಬಮ್<br>ಪಠ್ಯ ಪುಸ್ತಕ | [illegible] | __ಪೂರ್ವ ಸಿದ್ಧತಾ ಚಟುವಟಿಕೆ :__ “ಕಾವೇರಿ ತೀರದಲ್ಲಿ” ಒಂದು ಕಾಡು ಈ ಅಭಿನಯ ಗೀತೆಯನ್ನು ಜೊತೆಯಾಗಿ ಹಾಡುವರು. |
| | 30 ನಿ | | | | ಬರವಣಿಗೆ | ಪಠ್ಯಪುಸ್ತಕದ 17ನೇ ಪುಟದಲ್ಲಿರುವ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಲು ಹೇಳುವರು. | | | | [illegible] | __ಕಲಿಕಾಂಶ ಚಟುವಟಿಕೆ :__ ಪ್ರಾಣಿಗಳ ಚಿತ್ರಗಳನ್ನು ಅಂಟಿಸಿರುವ ಆಲ್ಬಮನ್ನು ನೀಡಿ ಅದರಲ್ಲಿ ಭೂವಾಸಿ, ಜಲವಾಸಿ ಹಾಗೂ ಮರವಾಸಿಗಳನ್ನು ಗುರ್ತಿಸಲು ಹೇಳಿ ಪಟ್ಟಿ ಮಾಡಿಸುವುದು. |
| | 10 ನಿ | | | | [illegible] | ಪ್ರಶ್ನೆಗಳಿಗೆ ಬರೆದ ಉತ್ತರಗಳ ಪರಿಶೀಲನೆ ಮಾಡಿ ಮಾರ್ಗದರ್ಶನ ನೀಡುವರು. | | | | [illegible] | ಮುಂದಿನ ಚಟುವಟಿಕೆಗಳಿಗೆ ಸೂಚನೆ ನೀಡುವರು. |
| | 25 ನಿ | | | | [illegible] | __ಕಲಿಕಾಂಶ ಚಟುವಟಿಕೆ :__<br>ದುಂಬಿ ನಾನಾದರೆ ಮಕರಂದ ನೀಡುವೆ<br>ನಾ ಮೀನಾದರೆ ನೀರಿನಲ್ಲಿ ಈಜುವೆ<br>ಏನಾಗದಿದ್ದರು ಪುಟ್ಟ ಮಗುವಾಗುವೆ.<br>ಏನಾಗದಿದ್ದರು ಶಾಲೆ ಮಗುವಾಗುವೆ.<br>ಹಸುವು ನಾನಾದರೆ ಹಾಲನ್ನು ನೀಡುವೆ<br>ನಾ ಎತ್ತಾದರೆ ಹೊಲವನ್ನು ಊಳುವೆ<br>ಏನಾಗದಿದ್ದರು ಪುಟ್ಟ ಮಗುವಾಗುವೆ<br>ಏನಾಗದಿದ್ದರು ಶಾಲೆ ಮಗುವಾಗುವೆ<br>ಜೇನು ಹುಳುವಿಗೆ ಸಂಬಂಧ ಪಟ್ಟ ಹಾಡನ್ನು ಬರೆಸುವರು. | | | | ಬರವಣಿಗೆ | ಪುಟಸಂಖ್ಯೆ 22ರಲ್ಲಿರುವ ತಿಳಿ-ಕಲಿ ವಿಭಾಗದ ಪ್ರಶ್ನೆಗಳಿಗೆ ಉತ್ತರವನ್ನು ಮಾಡಿಸುವರು. |
| | 5 ನಿ | | | | | ಜೇನುಗೂಡಿನ ಚಿತ್ರ ಬರೆಯಲು ಹೇಳುವರು. | | | | | ಉತ್ತರಿಸಿದ ಉತ್ತರಗಳನ್ನು ಪರಿಶೀಲಿಸುವರು ಹಾಗೂ ಮಾರ್ಗದರ್ಶನ ನೀಡುವರು. |

**28ನೇ ದಿನ**



| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯ ವಿವರ | ಬೋಧನೋಪಕರಣ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯ ವಿವರ | ಬೋಧನೋಪಕರಣ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ<br>ನಾಯಿ ಬಾಲ ಜಗ್ಗಿದ | ಪ್ರಾಸ, ಪದ್ಯ, ಹಾಡು ಮತ್ತು ಸರಳ ಕಥೆಗಳನ್ನು ಓದುವುದು. | ಪ್ರಾಸ ಪದಗಳ ಚಾರ್ಟ್ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :**<br>ದೀಪ ದೀಪ ತೋರು ನಿನ್ನ ದೀಪ ಕತ್ತಲನ್ನು ಕಳೆಯಲು ನೀ ದಾರಿ ದೀಪ ॥<br>ದೇವರ ಮನೆಯ ಎಣ್ಣೆ ದೀಪ ಊಟದ ಮನೆಯ ವಿದ್ಯುತ್ ದೀಪ<br>ಮಲಗುವ ಮನೆಯ ಮಿನುಗುವ ದೀಪ ಬಡವರ ಮನೆಯ ಚಿಮಣಿ ದೀಪ ॥<br>ಪ್ರಾಸ ಪದ್ಯಗಳನ್ನು ರಾಗವಾಗಿ ಹಾಡಿಸುವರು. | ಕನ್ನಡ<br>ಎಯುದ ಜಾಣೆ | ರಸ್ತೆಯ ಚಿಹ್ನೆ ಮತ್ತು ಸೂಚನಾ ಫಲಕಗಳಲ್ಲಿನ ಸರಳ ಸೂಚನೆಗಳನ್ನು ಓದುವುದು. | ಪ್ರಾಸ ಪದಗಳ ಚಾರ್ಟ್<br><br>ಪಠ್ಯಪುಸ್ತಕ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :**<br>2ನೇ ತರಗತಿಯ ಮಕ್ಕಳ ಚಟುವಟಿಕೆಯ ಜೊತೆಯಲ್ಲಿ ಮೂರನೇ ತರಗತಿಯ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವರು. |
| | 5 ನಿ | | | | | ಪ್ರಾಸ ಪದ್ಯಗಳ ಚಾರ್ಟನ್ನು ಹಾಕಿ ನಕಲು ಮಾಡಲು ತಿಳಿಸುವರು. | | | | | ಮುಂದಿನ ಚಟುವಟಿಕೆಗೆ ಅಣಿಗೊಳ್ಳುವರು. |
| | 25 ನಿ | | | | ಹಿರೇಮಣಿ | **ಕಲಿಕಾಂಶ ಚಟುವಟಿಕೆ :** ಮಕ್ಕಳು ಮೇಲಿನ ಚಟುವಟಿಕೆಯನ್ನು ಹಿರೇಮಣಿ ಸಹಾಯದಿಂದ ಮಾಡುವರು. | | | | ಶಿಕ್ಷಕ | **ಕಲಿಕಾಂಶ ಚಟುವಟಿಕೆ :** ಶಿಕ್ಷಕರು ಪಾಠದ ಭಾಗವನ್ನು ಸ್ವರಭಾರಸಹಿತ ಸ್ಪಷ್ಟವಾಗಿ ಓದುವರು. |
| | 10 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು ಹಾಗೂ ಮಾರ್ಗದರ್ಶನ ನೀಡುವರು. | | | | | ಕಠಿಣ ಪದಗಳನ್ನು ಹುಡುಕಲು ತಿಳಿಸುವರು. |
| | 25 ನಿ | | | | ಶಿಕ್ಷಕ | **ಬಳಕೆಯ ಹಂತ :** ಬೇರೆ ಪ್ರಾಸ ಪದಗಳನ್ನು ಮಕ್ಕಳಿಂದ ರಾಗವಾಗಿ ಹಾಡಿಸುವರು. | | | | ಹಿರೇ ಮಣಿ | ಹಿರೇಮಣಿ ಸಹಾಯದಿಂದ ಮೇಲಿನ ಚಟುವಟಿಕೆಯನ್ನು ಮಾಡಿಸುವರು. |
| | 5 ನಿ | | | | | ಮೇಲಿನ ಚಟುವಟಿಕೆ ಮುಂದುವರೆಸುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು ಹಾಗೂ ಸೂಕ್ತ ಮಾರ್ಗದರ್ಶನ ನೀಡುವರು. |
| 2ನೇ | 5 ನಿ<br>3ನೇ | ಗಣಿತ<br>ಸಂಖ್ಯೆಗಳು | 1 ರಿಂದ 99 ವರೆಗಿನ ಸಂಖ್ಯೆಗಳನ್ನು ಏರಿಕೆ, ಇಳಿಕೆ ಕ್ರಮದಲ್ಲಿ ಬರೆಯುವುದು. | ಕಡ್ಡಿಗಳು, ಗೋಲಿಗಳು | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** "ಹತ್ತು ಹತ್ತು ಇಪ್ಪತ್ತು ಕಾಗೆಗೆ ಒಂದು ಗೂಡಿತ್ತು" ಅಭಿನಯ ಗೀತೆಯನ್ನು ಹೇಳಿಕೊಡುವರು. | ಗಣಿತ<br>ಪೂರ್ಣಾಂಕಗಳು ಮತ್ತು ಸಂಖ್ಯಾ ಸೂಚಕಗಳು | 1 ರಿಂದ 999ರ ಒಳಗಿರುವ 5 ಅಥವಾ 6 ಸಂಖ್ಯೆಗಳನ್ನು ಕ್ರಮಾಗತವಾಗಿ ಜೋಡಿಸಿ (ಏರಿಕೆ/ ಇಳಿಕೆ ಕ್ರಮದಲ್ಲಿ) ಕೊಟ್ಟಾಗ ಬಿಟ್ಟು ಹೋಗಿರುವ ಸಂಖ್ಯೆಯನ್ನು ಪತ್ತೆ ಹಚ್ಚುವುದು. | ಮಕ್ಕಳು ಮಿಂಚುಪಟಕ, ಮಣಿ, ಸ್ಟ್ರಿಪ್ ಮತ್ತು ಕಾಗದದಲ್ಲಿ ತಯಾರಿಸಿದ ಸಂಖ್ಯಾ ಮಾಲೆ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** 2ನೇ ತರಗತಿಯ ಮಕ್ಕಳ ಜೊತೆಯಲ್ಲಿಯೇ ಈ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವರು. |
| | 5 ನಿ | | | | | ಮಕ್ಕಳನ್ನು ಮುಂದಿನ ಚಟುವಟಿಕೆಗೆ ಅಣಿಗೊಳಿಸುವರು. | | | | | ಹಿಂದಿನ ದಿನದ ಚಟುವಟಿಕೆ ಮಾಡಿಸಲು ಹಿರೇಮಣಿಗೆ ಸೂಚನೆ ನೀಡುವರು. |
| | 25 ನಿ | | | | ಹಿರೇಮಣಿ | **ಕಲಿಕಾಂಶ ಚಟುವಟಿಕೆ :** ಪ.ಪು.ದ ಪುಟಸಂಖ್ಯೆ 44, 45 ರಲ್ಲಿರುವಂತೆ ಕಡ್ಡಿ, ಗೋಲಿ, ಮಿಂಚುಪಟ್ಟಿ ಬಳಸಿ ಅತೀ ಕಡಿಮೆ (ಕನಿಷ್ಟ) ಅತೀ ಹೆಚ್ಚು (ಗರಿಷ್ಟ) ಹಾಗು ಅವುಗಳನ್ನು ಏರಿಕೆ ಕ್ರಮದಲ್ಲಿ ಜೋಡಿಸುವ ಚಟುವಟಿಕೆ ಮಾಡಿಸುವರು. | | | | ಹಿರೇಮಣಿ | ಹಿಂದಿನ ದಿನದ ಚಟುವಟಿಕೆಯನ್ನು ಮುಂದುವರಿಸಿಕೊಂಡು ಹೋಗುವರು. |
| | 5 ನಿ | | | | | ಮಕ್ಕಳು ಮಾಡಿರುವ ಚಟುವಟಿಕೆಯನ್ನು ಪರಿಶೀಲನೆ ಮಾಡುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿ ಮಾರ್ಗದರ್ಶನ ನೀಡುವರು. |
| | 40 ನಿ | ಚಲನ ವಲನ | ಮಕ್ಕಳಲ್ಲಿ ಸಾಮೂಹಿಕತೆಯನ್ನು ಬೆಳೆಸುವುದು. | ಪುಸ್ತಕ, ಗೀತೆ ಪುಸ್ತಕ, ಧ್ವನಿಸುರುಳಿ, ಆರ್.ಸಿ.ಡಿ. | ಶಿಕ್ಷಕ | ಮುಂದೆ ಮುಂದೆ ಸಾಗುವ । ಎಲ್ಲರೊಂದು ಗೂಡುವ ॥<br>ಭಾರತಾಂಬೆ ನೆನೆಯುವ । ಶಾಂತಿಯಿಂದ ಬಾಳುವಾ...॥ ಈ ಗೀತೆಯನ್ನು ಕಪ್ಪುಹಲಗೆಯ ಮೇಲೆ ಬರೆದು ಮಕ್ಕಳಿಗೆ ರಾಗವಾಗಿ ಹೇಳಿಕೊಡುವರು. | ಚಲನ ವಲನ | ಮಕ್ಕಳಲ್ಲಿ ಸಾಮೂಹಿಕತೆಯನ್ನು ಬೆಳೆಸುವುದು. | ಪುಸ್ತಕ, ಗೀತೆ ಪುಸ್ತಕ, ಧ್ವನಿಸುರುಳಿ, ಆರ್.ಸಿ.ಡಿ. | ಶಿಕ್ಷಕ | 2ನೇ ತರಗತಿಯ ಮಕ್ಕಳು 3ನೇ ತರಗತಿಯ ಮಕ್ಕಳ ಹಾಡುವ ಚಟುವಟಿಕೆಯಲ್ಲಿ ಭಾಗವಹಿಸುವರು. |

**28ನೇ ದಿನ**



| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 ನಿ | ಜೀವನ ವಿಜ್ಞಾನ | ಸ್ಪರ್ಧಾ ಮನೋಭಾವ ಆಟಗಳಲ್ಲಿ ಭಾಗವಹಿಸುವುದರ ಮೂಲಕ ವಿಶ್ವಾಸ ಬೆಳೆಸುವುದು. | | ಶಿಕ್ಷಕ | **<u>ಆಟ : ಹಸು ಮತ್ತು ಹುಲಿ ಆಟ</u>**<br>ಮಕ್ಕಳನ್ನು ಹೊರಾಂಗಣಕ್ಕೆ ಕರೆದು ಕೊಂಡುಹೋಗಿ, ವೃತ್ತಾಕಾರವಾಗಿ, ನಿಲ್ಲಿಸುವುದು. ಹಸು ಮತ್ತು ಹುಲಿಯ ಆಟದ ನಿಯಮಗಳನ್ನು ತಿಳಿಸಿ ಆಟ ಆಡಿಸುವರು. | | ಸ್ಪರ್ಧಾಮನೋಭಾವ ಆಟಗಳಲ್ಲಿ ಭಾಗವಹಿಸುವುದರ ಮೂಲಕ ವಿಶ್ವಾಸ ಬೆಳೆಸುವುದು. | | ಶಿಕ್ಷಕ | ಎರಡನೇ ತರಗತಿಯ ಮಕ್ಕಳ ಚಟುವಟಿಕೆಯಲ್ಲಿ ಮೂರನೇ ತರಗತಿಯ ಮಕ್ಕಳು ಭಾಗವಹಿಸುವರು. |
| | 40 ನೇ | ಚಿನ್ನರ ಚುಕ್ಕಿ | | | ಶಿಕ್ಷಕ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ | ಚಿನ್ನರ ಚುಕ್ಕಿ | | | ಶಿಕ್ಷಕ | ಮೂರನೇ ತರಗತಿಯ ಮಕ್ಕಳು ಎರಡನೇ ತರಗತಿ ಮಕ್ಕಳೊಂದಿಗೆ ಭಾಗವಹಿಸುವರು. |
| 4ನೇ | 10 ನಿ | ಪರಿಸರ ಅಧ್ಯಯನ<br>ಹೊರ ಸಂಚಾರ | ಪ್ರಕೃತಿಯ ಸೌಂದರ್ಯವನ್ನು ಮೆಚ್ಚುವರು ಪ್ರಾಣಿಗಳ ಮನೆಗಳನ್ನು ಗುರ್ತಿಸುವರು. | ಪಠ್ಯಪುಸ್ತಕ | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>**<br>ಮಂಗನ ಮದುವೆ ಅಭಿನಯ ಗೀತೆಯನ್ನು ಹೇಳಿಕೊಡುವರು. (ಪಠ್ಯಪುಸ್ತಕದಲ್ಲಿದೆ) | ಪರಿಸರ ಅಧ್ಯಯನ<br>ಪ್ರಾಣಿ ಪ್ರಪಂಚ | ಪ್ರಾಣಿಗಳ ವಾಸಸ್ಥಳ, ದೇಹದಗಾತ್ರ, ಆಕಾರಗಳನ್ನು ಗುರ್ತಿಸುವರು<br>ಪ್ರಾಣಿಗಳ ಆಹಾರಾಭ್ಯಾಸವನ್ನು ತಿಳಿಯುವರು.<br>ಪ್ರಾಣಿಗಳ ಆಹಾರಾಭ್ಯಾಸದ ಮೇಲೆ ವಿಂಗಡಿಸುವರು.<br>ಮಾನವರಿಗೂ ಇತರ ಪ್ರಾಣಿಗಳಿಗೂ ಇರುವ ಹೋಲಿಕೆ ವ್ಯತ್ಯಾಸವನ್ನು ತಿಳಿಯುವರು. | ಕೆಲವು ಪ್ರಾಣಿಗಳ ಚಿತ್ರ ಪಟಗಳು | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>**<br>ಮಂಗನ ಮದುವೆ ಅಭಿನಯ ಗೀತೆಯನ್ನು ಹಾಡುವರು. |
| | 5 ನಿ | | | | | ಮುಂದಿನ ಚಟುವಟಿಕೆಗೆ ಸೂಚನೆಯನ್ನು ನೀಡುವರು. | | | | | ಮಕ್ಕಳನ್ನು ಮುಂದಿನ ಪಾಠಕ್ಕೆ ಅಣಿಗೊಳಿಸುವರು. |
| | 25 ನಿ | | | | ಹಿರೇಮಣಿ | **<u>ಪುನರ್ಬಲನ :</u>**<br>ಪಠ್ಯಪುಸ್ತಕದಲ್ಲಿರುವ ಪುಟಸಂಖ್ಯೆ 18 ರಲ್ಲಿರುವ ಪ್ರಾಣಿಗಳು ಹಾಗೂ ಅವುಗಳ ವಾಸಸ್ಥಾನದ ಬಗ್ಗೆ ಹೊಂದಿಸುವ ಚಟುವಟಿಕೆ ಮಾಡಿಸುವರು. | | | | ಶಿಕ್ಷಕ | **<u>ಕಲಿಕಾಂಶ ಚಟುವಟಿಕೆ :</u>**<br>ಪ್ರಾಣಿಗಳು ತಿನ್ನುವ ಆಹಾರಗಳ ಆಧಾರದ ಮೇಲೆ ಅವುಗಳನ್ನು ವಿಂಗಡಿಸಲು ಹೇಳುವರು. ಹಾಗೂ ಪಟ್ಟಿ ಮಾಡಿಸುವರು. ಸಸ್ಯಾಹಾರಿ ಮತ್ತು ಮಾಂಸಹಾರಿ ಪ್ರಾಣಿಗಳ ಚಿತ್ರಗಳನ್ನು ಒಂದೆಡೆ ಹಾಕಿ ವಿಂಗಡಿಸಲು ಹೇಳುವರು. |
| | 10 ನಿ | | | | ಶಿಕ್ಷಕ | ಮಕ್ಕಳು ಮಾಡಿದ ಚಟುವಟಿಕೆಯನ್ನು ಪರಿಶೀಲಿಸಿ ಮಾರ್ಗದರ್ಶನ ನೀಡುವರು. | | | | ಶಿಕ್ಷಕ | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. |
| | 30 ನಿ | | | ಕಾಗದದ ರಟ್ಟು ಬಣ್ಣಗಳು | ಶಿಕ್ಷಕ | ರಟ್ಟು ಹಾಗೂ ಬಣ್ಣವನ್ನು ಬಳಸಿ ಸಿಂಹದಗುಹೆಯ ಮಾದರಿಯನ್ನು ಶಿಕ್ಷಕರು ಮಾದರಿಯಾಗಿ ಮಾಡಿ ಮಕ್ಕಳಿಗೆ ಪ್ರದರ್ಶಿಸುವರು. | | | | | ಪಠ್ಯಪುಸ್ತಕದ ಪುಟಸಂಖ್ಯೆ 23ರಲ್ಲಿರುವ ವಿಂಗಡಿಸಿ ಬರೆ. ಚಟುವಟಿಕೆ ಮಾಡಿಸುವರು. |
| | | | | | | | | | | | ಮಕ್ಕಳು ಮಾಡಿದ ಚಟುವಟಿಕೆಯನ್ನು ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡುವರು. |

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿನ್ಯಾಸ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿನ್ಯಾಸ | ಕಲಿಕಾ ಪ್ರಕ್ರಿಯೆ |
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| 1ನೇ | 10 ನಿ | ಕನ್ನಡ ನಾಯಿ ಬಾಲ ಚಿಗುರು | ಪ್ರಾಸ, ಪದ್ಯ, ಪಾಠ ಮತ್ತು ಸರಳ ಕಥೆಗಳನ್ನು ಓದುವರು. | ಚಿತ್ರ ಕಥೆಗಳ ಸಂಗ್ರಹ, ಪ್ರಾಸ ಪದ್ಯಗಳ ಚಾರ್ಟ್, ಪಠ್ಯಪುಸ್ತಕ | ತರಗತಿ | **ಪೂರ್ವ ಸಿದ್ಧತಾ ಚಟುವಟಿಕೆ :** ಚಿತ್ರಕಥೆಗಳನ್ನು ಹೇಳುವರು. | ಪ. ಅ<br>ಕನ್ನಡ ಬಯಲು ಶಾಲೆ | ರಸ್ತೆಯ ಚಿಹ್ನೆ ಮತ್ತು ಸೂಚನಾ ಫಲಕಗಳಲ್ಲಿನ ಸರಳ ಸೂಚನೆಗಳನ್ನು ಓದುವರು. | ಪಠ್ಯಪುಸ್ತಕ | ತರಗತಿ | **ಪೂರ್ವ ಸಿದ್ಧತಾ ಚಟುವಟಿಕೆ :** ಚಿತ್ರಕಥೆಗಳನ್ನು ಹೇಳುವರು. |
| | 5 ನಿ | | | | | **ಸೂಚನೆ :**<br>ಪ್ರಾಸ ಪದ್ಯಗಳಲ್ಲಿ ಪ್ರಾಸ ಪದಗಳನ್ನು ಪಟ್ಟಿಮಾಡಿ ಓದಲು ತಿಳಿಸುವರು. | | | | ವೈಯಕ್ತಿಕ | ಮುಂದಿನ ಚಟುವಟಿಕೆಗೆ ಅಣಿಗೊಳಿಸುವರು. |
| | 25 ನಿ | | | | ವೈಯಕ್ತಿಕ | ಮಕ್ಕಳು ಪ್ರಾಸ ಪದಗಳ ಪಟ್ಟಿಯನ್ನು ಹಿರೇಮಣಿ ಸಹಾಯದಿಂದ ಮಾಡುವರು. | | | | ತರಗತಿ | **ಕಲಿಕಾಂಶ ಚಟುವಟಿಕೆ :**<br>ಪಾಠದ ಮುಂದುವರಿದ ಭಾಗವನ್ನು ಶಿಕ್ಷಕಿಯು ಸ್ವರ ಭಾರ ಸಹಿತ, ಸ್ಪಷ್ಟವಾಗಿ ಓದುವರು. |
| | 10 ನಿ | | | | ತರಗತಿ | ಪ್ರಾಸ ಪದಗಳನ್ನು ಪರಿಶೀಲಿಸುವರು. | | | | | ಹಿರೇಮಣಿ ಸಹಾಯದಿಂದ ಪಾಠವನ್ನು ಓದಲು ಸೂಚನೆ ನೀಡುವರು. |
| | 25 ನಿ | | | | ತರಗತಿ | **ಪುನರ್ಬಲನ ಚಟುವಟಿಕೆ :**<br>ಪಾಠದಲ್ಲಿರುವ ಪ್ರಾಸ ಪದ್ಯಗಳನ್ನು ಶಿಕ್ಷಕಿಯು ರಾಗಬದ್ಧವಾಗಿ ಹಾಡುವರು. ಮತ್ತು ಮಕ್ಕಳಿಂದ ಹಾಡಿಸುವರು. | | | | ವೈಯಕ್ತಿಕ | ಶಿಕ್ಷಕರ ಸೂಚನೆಯಂತೆ ಹಿರೇಮಣಿಯ ನೇತೃತ್ವದಲ್ಲಿ ಮಕ್ಕಳು ಪಾಠವನ್ನು ಓದುವರು. |
| | 5 ನಿ | | | | | ಪದ್ಯಗಳಲ್ಲಿರುವ ಪ್ರಾಸಪದಗಳನ್ನು ಬರೆಯಲು ತಿಳಿಸುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡುವರು. |
| 2ನೇ | 10 ನಿ | ಕನ್ನಡ ನಾಯಿ ಬಾಲ ಚಿಗುರು | ಪ್ರಾಸ, ಪದ್ಯ, ಪಾಠ ಮತ್ತು ಸರಳ ಕಥೆಗಳನ್ನು ಓದುವರು. | ಪ್ರಾಸ ಗೀತೆಗಳ ಮಿಂಚುಪಟ್ಟಿಗಳು | ತರಗತಿ | **ಪೂರ್ವ ಸಿದ್ಧತಾ ಚಟುವಟಿಕೆ :** ಮಂಗನ ಮದುವೆ ಅಭಿನಯ ಗೀತೆಯನ್ನು ಹೇಳಿ ಕೊಡುವರು. | ಪರಿಸರ ಅಧ್ಯಯನ<br>ಪ್ರಾಣಿ ಪ್ರಪಂಚ | ಪ್ರಾಣಿಗಳ ವಾಸಸ್ಥಳ, ದೇಹಾಕೃತಿ, ಆಕಾರಗಳನ್ನು ಗುರ್ತಿಸುವರು<br>ಪ್ರಾಣಿಗಳ ಆಹಾರಾಭ್ಯಾಸವನ್ನು ತಿಳಿಯುವರು.<br>ಪ್ರಾಣಿಗಳ ಆಹಾರಾಭ್ಯಾಸದ ಮೇಲೆ ವಿಂಗಡಿಸುವರು.<br>ಮಾನವರಿಗೂ ಪ್ರಾಣಿಗಳಿಗೂ ಇರುವ ಹೋಲಿಕೆ ವ್ಯತ್ಯಾಸವನ್ನು ತಿಳಿಯುವರು. | ದೇಹದ ಭಾಗಗಳ ಚಿತ್ರದ ಪಟಗಳು | ತರಗತಿ | ಮಂಗನ ಮದುವೆ ಅಭಿನಯ ಗೀತೆಯನ್ನು ಹಾಡುವರು. |
| | 5 ನಿ | | | | | ಮುಂದಿನ ಚಟುವಟಿಕೆಗೆ ಮಾರ್ಗದರ್ಶನ ನೀಡುವರು. | | | | | ಮಕ್ಕಳು ಮುಂದಿನ ಪಾಠಕ್ಕೆ ಸಿದ್ಧತೆ ಮಾಡಿಕೊಳ್ಳುವರು. |
| | 25 ನಿ | | | | ವೈಯಕ್ತಿಕ | ಪ್ರಾಸಗೀತೆಯನ್ನು ಬರೆದಿರುವ ಮಿಂಚು ಪಟ್ಟಿಯನ್ನು ಕೊಟ್ಟು ಬರೆಸುವರು. | | | | ತರಗತಿ | **ಪುನರ್ಬಲನ ಚಟುವಟಿಕೆ :**<br>ಕೆಲವು ಪ್ರಾಣಿಗಳ ದೇಹದ ಭಾಗಗಳ ಚಿತ್ರಪಟಗಳನ್ನು ಮಕ್ಕಳ ಮುಂದೆ ಹಾಕಿ ಅವುಗಳ ಭಾಗಗಳನ್ನು ಹೆಸರಿಸಲು ಹೇಳುವರು. |
| | 10 ನಿ | | | ಜನ, ಮನ, ಕಾನನ, ವನ ಇತ್ಯಾದಿ | | ಬರೆದಿರುವ ಪ್ರಾಸಗೀತೆಗಳ ಪರಿಶೀಲನೆ ಮಾಡುವರು. | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. |
| | 25 ನಿ | | | | ತರಗತಿ | **ಪುನರ್ಬಲನ ಚಟುವಟಿಕೆ :**<br>ಒಂದೇ ಅಕ್ಷರದಿಂದ ಮುಕ್ತಾಯವಾಗುವ ಪದಗಳನ್ನು ಬರೆಸುವರು.<br>ಮಾದರಿ : ಕಾಡು, ನಾಡು. | | | | ವೈಯಕ್ತಿಕ | ಕೆಲವು ಪ್ರಾಣಿಗಳ ಚಿತ್ರಪಟಗಳನ್ನು ಹಾಕಿ ಅವುಗಳ ಆಹಾರಾಭ್ಯಾಸದ ಆಧಾರದ ಮೇಲೆ ವಿಂಗಡಿಸಲು ಹೇಳಿ ಆ ಗುಂಪುಗಳಿಗೆ ಹೆಸರಿಡಲು ಹೇಳುವರು. |
| | 5 ನಿ | | | | | ಇನ್ನು ಬೇರೆ ಅಕ್ಷರಗಳು ಹಾಗೂ ಸಾಮ್ಯತೆ ಇರುವ ಪದಗಳ ಪಟ್ಟಿ ಮಾಡಿಕೊಂಡು ಬರಲು ಸೂಚಿಸುವರು. | | | | | ಕೊಟ್ಟ ಚಟುವಟಿಕೆ ಪರಿಶೀಲನೆ ಮಾಡುವರು. |

**29ನೇ ದಿನ**



| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 ನಿ | ಸಾ.ಉ.ಉ.ಕಾ. | ಜೇಡಿಮಣ್ಣುನಿಂದ ಆಟದ ಮತ್ತು ಅಲಂಕಾರಿಕ ವಸ್ತುಗಳನ್ನು ತಯಾರಿಸುವುದು. | ಜೇಡಿಮಣ್ಣು | ಶಿಕ್ಷಕ | **ಜೇಡಿ ಮಣ್ಣಿನಿಂದ ವಿವಿಧ ಮಾದರಿಗಳನ್ನು ತಯಾರಿಸುವುದು.**<br><br>ಹದವಾದ ಜೇಡಿಮಣ್ಣನ್ನು ಸಂಖ್ಯೆಗೆ ಅನುಗುಣವಾಗಿ ಶಾಲೆಗೆ ಜಾಗೃತವಾಗಿ ತರಿಸುವರು.<br>ಉದಾ : ಚಕ್ರಗಳು, ಬಟ್ಟಲು, ಕುಡಿಕೆಗಳು, ಹಾವು, ಹಸು, ಗಣಪ, ಮೊಬೈಲ್ ಇತ್ಯಾದಿಗಳನ್ನು ತಯಾರಿಸುವರು.<br>ಶಿಕ್ಷಕರು ಮಾರ್ಗದರ್ಶನ ನೀಡುವರು. ಹಾಗೆಯೇ ಪ್ರತಿ ಮಗುವು ಬೇರೆ ಬೇರೆ ಮಾದರಿಗಳನ್ನು ತಯಾರಿಸುವರು.<br>ಚಟುವಟಿಕೆಯ ನಂತರ ಕೈಗಳನ್ನು ಸ್ವಚ್ಛವಾಗಿ ತೊಳೆಯುವಂತೆ ಹೇಳುವರು ಮತ್ತು ಸಮವಸ್ತ್ರಗಳು ಕೊಳೆಯಾಗದಂತೆ ನೋಡಿಕೊಳ್ಳಲು ತಿಳಿಸುವರು | ಸಾ.ಉ.ಉ.ಕಾ. | ಜೇಡಿಮಣ್ಣುನಿಂದ ಆಟದ ಮತ್ತು ಅಲಂಕಾರಿಕ ವಸ್ತುಗಳನ್ನು ತಯಾರಿಸುವುದು. | ಜೇಡಿಮಣ್ಣು | ಶಿಕ್ಷಕ | ಮೂರನೇ ತರಗತಿಯ ಮಕ್ಕಳೂ ಎರಡನೇ ತರಗತಿಯ ಮಕ್ಕಳ ಜೊತೆ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 40 ನಿ | ಚಿನ್ನರ ಚುಕ್ಕಿ | | ರೇಡಿಯೋ, ಕಪ್ಪುಹಲಗೆ, ಸೀಮೆಸುಣ್ಣ | ಶಿಕ್ಷಕ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ | | ಚಿನ್ನರ ಚುಕ್ಕಿ | ರೇಡಿಯೋ, ಕಪ್ಪುಹಲಗೆ, ಸೀಮೆಸುಣ್ಣ | ಶಿಕ್ಷಕ | ಮೂರನೇ ತರಗತಿಯ ಮಕ್ಕಳೂ ಎರಡನೇ ತರಗತಿಯ ಮಕ್ಕಳ ಜೊತೆ ಚಟುವಟಿಕೆಯಲ್ಲಿ ಭಾಗವಹಿಸುವರು. |
| 4ನೇ | 40 ನಿ | ಜೀವನ ವಿಜ್ಞಾನ | ಮಕ್ಕಳಲ್ಲಿ ಶಾರೀರಿಕ ವಿಕಸನದಲ್ಲಿ ಕ್ರೀಡಾ ಮನೋಭಾವ ಬೆಳೆಸುವುದು. | ಬಿಳಿಪುಡಿ (ಬೂದಿ) | ಶಿಕ್ಷಕ | ಮಕ್ಕಳಿಗೆ ಮನರಂಜಕವಾದ ಆಟಗಳನ್ನು ಆಡಿಸುವರು.<br>ಉದಾ : "ಬಾಂಬ್ ಇನ್‌ದ ಸಿಟಿ,"<br><br>(ಮಕ್ಕಳಿಗನುಗುಣವಾಗಿ ವೃತ್ತ ವನ್ನು ರಚಿಸಿ, ನಾಲ್ಕು ಭಾಗ ಗಳಾಗಿ ಮಾಡಿ, ಒಂದೊಂದು ಭಾಗಕ್ಕೆ ಒಂದೊಂದು ಹೆಸರನ್ನು ಕೊಡುವರು.)<br>ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಚಲಿಸುವಂತೆ ಹೇಳುವರು. ಹೊರಗಡೆ ಒಬ್ಬ (ಶಿಕ್ಷಕ) ಸೀಟಿ ಊದುವುದು. ಊದಿದ ತಕ್ಷಣ ಮಕ್ಕಳು ಆಯಾ ಭಾಗದಲ್ಲಿ ನಿಲ್ಲುವರು. ನಂತರ ಅದೇ ವ್ಯಕ್ತಿ ನಾಲ್ಕು ಭಾಗಗಳ ಹೆಸರುಗಳಲ್ಲಿ ಒಂದನ್ನು ಹೆಸರಿಸುವನು. ಆಗ ಆ ಭಾಗದಲ್ಲಿರುವ ಮಕ್ಕಳು ಆಟದಿಂದ ಹೊರಗಡೆ ಬರಬೇಕು. (out) ಆಟವು ಮುಂದುವರಿಯುತ್ತಾ ಹೋಗುತ್ತದೆ. ಹೀಗೆ ಕೊನೆಗೆ ಉಳಿದ ಒಬ್ಬ ವಿದ್ಯಾರ್ಥಿಯನ್ನು ವಿಜೇತ ವಿದ್ಯಾರ್ಥಿ ಎಂದು ಘೋಷಿಸುವುದು. ಆಟವನ್ನು ಪುನರಾವರ್ತನೆ ಮಾಡಿಸುವುದು. | | ಮಕ್ಕಳಲ್ಲಿ ಶಾರೀರಿಕ ವಿಕಸನದಲ್ಲಿ ಕ್ರೀಡಾ ಮನೋಭಾವ ಬೆಳೆಸುವುದು. | ಬಿಳಿಪುಡಿ (ಬೂದಿ) | ಶಿಕ್ಷಕ | ಮೂರನೇ ತರಗತಿಯ ಮಕ್ಕಳೂ ಎರಡನೇ ತರಗತಿಯ ಮಕ್ಕಳ ಜೊತೆ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 40 ನಿ | ಮೌಲ್ಯ ಶಿಕ್ಷಣ | ಸಹಕಾರ ಮನೋ ಭಾವನೆ | | ಶಿಕ್ಷಕ | ಸಹಕಾರ ಮನೋಭಾವನೆಯನ್ನು ಹೊಂದಿರುವ ಮೌಲ್ಯದ ಬಗ್ಗೆ ನೀತಿಕಥೆಯನ್ನು ಹೇಳುವರು. | | ಮೌಲ್ಯ ಶಿಕ್ಷಣ | ಸಹಕಾರ ಮನೋ ಭಾವನೆ | ಶಿಕ್ಷಕ | ಮೂರನೇ ತರಗತಿಯ ಮಕ್ಕಳೂ ಎರಡನೇ ತರಗತಿಯ ಮಕ್ಕಳ ಜೊತೆ ಚಟುವಟಿಕೆಯಲ್ಲಿ ಭಾಗವಹಿಸುವರು. |

**30ನೇ ದಿನ**



| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಕಲಿಕಾ ಅಂಶ | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | **ಕಲಿಕಾ ಪ್ರಕ್ರಿಯೆ** | ವಿಷಯ ಮತ್ತು ಕಲಿಕಾ ಅಂಶ | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | **ಕಲಿಕಾ ಪ್ರಕ್ರಿಯೆ** |
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| 1ನೇ | 40 ನಿ | ದೈ.ಶಿ. | ಶಾರೀರಿಕ ವಿಕಾಸ | ಎರಡು ಮತ್ತು ಮೂರನೇ ತರಗತಿಯ ಮಕ್ಕಳನ್ನು ಹೊಂದಾಣಿಕೆ ಮಾಡಿಕೊಂಡು ಸಾಮೂಹಿಕ ಕವಾಯತನ್ನು ಮಾಡಿಸುವರು. | | | | | | | |
| 2ನೇ | 10 ನಿ | ಕನ್ನಡ ನಾಯಿ ಬಾಲ ಜಗ್ಗಿದ | ಪ್ರಾಸ, ಪದ್ಯ ಹಾಡು ಮತ್ತು ನೀತಿ ಕಥೆಗಳನ್ನು ಆಲಿಸುವರು. | ನೀತಿಕಥೆ ಪುಸ್ತಕ | ಶಿಕ್ಷಕಿ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಚಿತ್ರಪಟಗಳನ್ನು ತೋರಿಸಿ ಮಕ್ಕಳಿಂದಲೇ ಕಥೆಯನ್ನು ಹೇಳಿಸುವರು. | ಕನ್ನಡ ನಾಯಿಯ ಮರಿ | ಕಥೆ ಹೇಳುವ ಮತ್ತು ಸೂಚನಾ ಫಲಕಗಳಲ್ಲಿ ಸೂಚನೆಗಳನ್ನು ಓದುವರು. | ನೀತಿಕಥೆಗಳ ಸಂಗ್ರಹ | ಶಿಕ್ಷಕಿ | 2ನೇ ತರಗತಿಯ ಮಕ್ಕಳ ಜೊತೆಯಲ್ಲಿಯೇ 3ನೇ ತರಗತಿಯ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವರು. |
| | 5 ನಿ | | | | ಶಿಕ್ಷಕಿ | ಹಿರೇಮಣಿ ಸಹಾಯದಿಂದ ಪದ್ಯದ ಎರಡು ನುಡಿಯನ್ನು ಕಂಠಪಾಠ ಮಾಡಿಸಲು ಸೂಚನೆ ನೀಡುವರು. | | | | ಶಿಕ್ಷಕಿ | ಮುಂದಿನ ಪಾಠಕ್ಕೆ ಅಣಿಯಾಗುವಂತೆ ಸೂಚನೆ ನೀಡುವರು. |
| | 25 ನಿ | | | | ಸ್ವಯಂ ಕಲಿಕೆ | ಶಿಕ್ಷಕಿಯ ಸೂಚನೆಯಂತೆ ನಾಯಿಬಾಲ ಜಗ್ಗಿದ ಪದ್ಯದ ಮೊದಲ ಎರಡು ನುಡಿಯನ್ನು ಮಕ್ಕಳು ಕಂಠಪಾಠ ಮಾಡುವುದು ಮತ್ತು ಅಭ್ಯಾಸದ ಪ್ರಶ್ನೆಗಳಿಗೆ ಉತ್ತರವನ್ನು ಬರೆಯುವರು. | | | | ಶಿಕ್ಷಕಿ | **<u>ಪುನರ್ಬಲನಾ ಚಟುವಟಿಕೆ :</u>** ಅಭ್ಯಾಸದ ಪ್ರಶ್ನೆಗಳಿಗೆ ಮಕ್ಕಳಿಂದ ಉತ್ತರ ಕೇಳಿ ಪ್ರಶ್ನೆಗಳಿಗೆ ಉತ್ತರವನ್ನು ಬರೆಯುವರು. |
| | 10 ನಿ | | | | ಶಿಕ್ಷಕಿ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | ಶಿಕ್ಷಕಿ | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕಿ | **<u>ಪುನರ್ಬಲನ ಚಟುವಟಿಕೆ</u> :** ನೀತಿ ಕಥೆಯನ್ನು ಶಿಕ್ಷಕಿಯು ಮಕ್ಕಳಿಗೆ ಮನದಟ್ಟಾಗುವಂತೆ ಹೇಳುವುದು ಮತ್ತು ನೀತಿಯನ್ನು ತಿಳಿಯ ಪಡಿಸುವರು. | | | | ಶಿಕ್ಷಕಿ | 2ನೇ ತರಗತಿಯೊಂದಿಗೆ 3ನೇ ತರಗತಿಯ ಮಕ್ಕಳು ನೀತಿ ಕಥೆಯಲ್ಲಿ ಭಾಗವಹಿಸುವರು. |
| | 5 ನಿ | | | | ಶಿಕ್ಷಕಿ | ಮೇಲಿನ ಕಥೆಗೆ ಸಂಬಂಧ ಪಟ್ಟಂತೆ ಒಂದೆರಡು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು | | | | ಶಿಕ್ಷಕಿ | ನೀತಿ ಕಥೆಗಳಿಗೆ ಸಂಬಂಧ ಪಟ್ಟಂತೆ ಒಂದೆರಡು ಪ್ರಶ್ನೆಗಳನ್ನು ಕೇಳುವುದು. |
| | 40 ನಿ | ಲಲಿತಕಲೆ | ಮಕ್ಕಳಲ್ಲಿ ಸಂಗೀತದ ಬಗ್ಗೆ ಆಸಕ್ತಿ ಬೆಳೆಸುವುದು. | ಟೇಪ್‌ರೆಕಾರ್ಡರ್, ಕ್ಯಾಸೆಟ್, ಧ್ವನಿಸುರುಳಿ | ಶಿಕ್ಷಕಿ | **<u>ಜಾನಪದ ಗೀತೆ :</u>**<br>ತಿಂಗಾಳು ಮುಳುಗಿದ ವೋ<br>ರಂಗೋಲಿ ಬೆಳಗಿದ ವೋ ಸ್ವಾಮಿ ಮಾದಪ್ಪನಾ<br>ಪೂಜೆಗೆಂದು ಬಾಳೆ ಬಾಗಿದವೋ ॥<br>ಅಪ್ಪ ಮಾದಯ್ಯನಿಗೆ ತುಪ್ಪದಾರತಿ ಹಚ್ಚಿ<br>ಹೊಂಬಾಳೆ ಸೇವೆ ಮಾಡುವಾಗ ಬಾಳೆ ಬಾಗಿದವೋ ॥<br>ಅಣ್ಣ ಮಾದಯ್ಯನು ಸಣ್ಣ ತೇರಿನ ಮ್ಯಾಲೆ<br>ಸುಮ್ಮಾನೆ ಕೂತು ಶರಣರು ನೋಡುವಾಗ ಬಾಳೆ ಬಾಗಿದವೋ ॥<br>ಈ ಗೀತೆಯನ್ನು ಶಿಕ್ಷಕರು ರಾಗವಾಗಿ ಮಕ್ಕಳಿಗೆ ಹೇಳಿಕೊಡುವರು.<br>**ಸೂಚನೆ :** ಸಾಧ್ಯವಾದರೆ ಧ್ವನಿಸುರುಳಿಯನ್ನು ಬಳಸಿ ಗೀತೆಯನ್ನು ಹೇಳಿ ಕೊಡುವುದು. | ಲಲಿತಕಲೆ | ಮಕ್ಕಳಲ್ಲಿ ಸಂಗೀತದ ಆಸಕ್ತಿ ಬೆಳೆಸುವುದು. | ಟೇಪ್‌ರೆಕಾರ್ಡರ್, ಕ್ಯಾಸೆಟ್, ಧ್ವನಿಸುರುಳಿ | ಶಿಕ್ಷಕ | ಮೂರನೇ ತರಗತಿಯ ಮಕ್ಕಳನ್ನು 2ನೇ ತರಗತಿಯ ಮಕ್ಕಳ ಜೊತೆಯಲ್ಲಿ ಚಟುವಟಿಕೆಯಲ್ಲಿ ಭಾಗವಹಿಸುವರು. |
| 3ನೇ | 40 ನಿ | ಸಾ.ಉ.ಉ.ಕೆ. | ವೈಯಕ್ತಿಕ ಸ್ವಚ್ಛತೆ ಹಾಗೂ ಆರೋಗ್ಯದ ನಿಯಮಗಳನ್ನು ಪಾಲಿಸುವರು ಅಭ್ಯಾಸ ರೂಢಿಸಿಕೊಳ್ಳುವರು. | ಪೆನಾಯಿಲ್, ನೀರು | ಶಿಕ್ಷಕ | ಮೂರನೇ ತರಗತಿ ಮಕ್ಕಳು ಮಾಡುವ ಸ್ವಚ್ಛತಾ ಕಾರ್ಯ ಚಟುವಟಿಕೆಗಳಿಗೆ ನೀರು ತಂದು ಕೊಡುವ ಮೂಲಕ ನೆರವು ನೀಡುವರು, ಶಿಕ್ಷಕರು ವೀಕ್ಷಿಸುವರು ಹಾಗೂ ಮಾರ್ಗದರ್ಶನ ನೀಡುವರು. | ಸಾ.ಉ.ಉ.ಕೆ. | ವೈಯಕ್ತಿಕ ಸ್ವಚ್ಛತೆ ಹಾಗೂ ಆರೋಗ್ಯದ ನಿಯಮಗಳನ್ನು ಪಾಲಿಸುವರು ಅಭ್ಯಾಸ ರೂಢಿಸಿಕೊಳ್ಳುವರು. | ಪೆನಾಯಿಲ್, ನೀರು | ಶಿಕ್ಷಕ | ಶಾಲೆಯ ಆವರಣದ ಸ್ವಚ್ಛತೆ, ಶೌಚಾಲಯ ಸ್ವಚ್ಛತೆಯಲ್ಲಿ ಪೆನಾಯಿಲ್ ಹಾಕಿ, ನೀರು ಹಾಕುವ ಕೆಲಸ.<br>* ಶಾಲಾ ಆವರಣವನ್ನು ಶುಚಿಗೊಳಿಸುವರು.<br>* ಶೌಚಾಲಯಕ್ಕೆ ಪೆನಾಯಿಲ್ ಹಾಕಿ ನೀರನ್ನು ಹಾಕಿಸುವರು.<br>* ಮೇಲ್ಕಂಡ ಚಟುವಟಿಕೆಯನ್ನು ಶಿಕ್ಷಕರ ಮಾರ್ಗದರ್ಶನದಲ್ಲಿ ಮಕ್ಕಳು ಮಾಡುವರು. |

**31ನೇ ದಿನ**



| ದಿನ | ಸಮಯ ನಿಮಿಷ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ ನಾಯಿ ಬಾಲ ಜಗ್ಗಿದ | ಪ್ರಾಸ, ಪದ್ಯ ಹಾಡು ಮತ್ತು ಸರಳ ಕಥೆಗಳನ್ನು ಓದುವರು. | ಚಿತ್ರಕಥೆಗಳ ಸಂಗ್ರಹ, ಪದ್ಯ ಪುಸ್ತಕ, ದಪ್ಪ ಮುದ್ರಿತ ಕಥೆ ಪುಸ್ತಕ, ನಲಿಕಲಿ ಪುಸ್ತಕ | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಹಿಂದಿನ ಕನ್ನಡ ಅವಧಿಯ ಕಥೆಯನ್ನು ಪುನರಾವರ್ತಿಸುವರು. | | ರಸ್ತೆಯ ಚಿಹ್ನೆ ಮತ್ತು ಸೂಚನಾ ಫಲಕಗಳಲ್ಲಿನ ಸೂಚನೆಗಳನ್ನು ಓದುವರು. | ಪದ್ಯಪುಸ್ತಕ, ಮಕ್ಕಳ ಸಂಚಾರಿ ನಿಯಮಗಳ ಚಾರ್ಟ್ | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಹಿಂದಿನ ಕನ್ನಡ ಅವಧಿಯ ಕಥೆಯನ್ನು ಪುನರಾವರ್ತಿಸುವರು. |
| | 5 ನಿ | | | | | ಮುಂದಿನ ಚಟುವಟಿಕೆಗೆ ಅಣಿಗೊಳ್ಳುವುದು. | ಕನ್ನಡ ನಿಯಮ ಪಾಲಿಸಿ | | | | ಪಾಠದಲ್ಲಿರುವ ಕಠಿಣ ಪದಗಳನ್ನು ಬರೆಯಲು ತಿಳಿಸುವರು. "ಗಮನಿಸಿ ತಿಳಿ ಓದಿ ತಿಳಿ" ಬರೆಯಲು ಹಿರೇಮಣಿಗೆ ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | **ಪುನರ್ಬಲನ ಚಟುವಟಿಕೆ**<br>ಮಕ್ಕಳಿಂದ ಗಟ್ಟಿಯಾಗಿ ಮತ್ತು ವೈಯಕ್ತಿಕವಾಗಿ ನಾಯಿ ಬಾಲ ಜಗ್ಗಿದ ಪದ್ಯವನ್ನು ಹೇಳಿಸುವರು. | | | | ಹಿರೇಮಣಿ | ಹಿರೇಮಣಿ ಸಹಾಯದಿಂದ ಕಠಿಣ ಪದಗಳನ್ನು ಬರೆಯುವುದು ಮತ್ತು ಗಮನಿಸಿ ತಿಳಿ. ಓದಿ ತಿಳಿ ಚಟುವಟಿಕೆಯನ್ನು ಮಕ್ಕಳು ಮಾಡುವರು. |
| | 10 ನಿ | | | | ಶಿಕ್ಷಕ | ದಪ್ಪ ಮುದ್ರಿತ ಕಥೆ ಪುಸ್ತಕಗಳನ್ನು ಕೊಟ್ಟು ಓದಲು ಹಿರೇಮಣಿಗೆ ಸೂಚನೆ ನೀಡುವರು ಮತ್ತು ಭಾಷಾಭ್ಯಾಸ ಚಟುವಟಿಕೆಯನ್ನು ಮಾಡಲು ಸೂಚಿಸುವರು. | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸಿ ಮರ್ಗದರ್ಶನ ನೀಡುವರು. |
| | 25 ನಿ | | | | ಹಿರೇಮಣಿ | ಶಿಕ್ಷಕರ ಸೂಚನೆಯಂತೆ ಹಿರೇಮಣಿ ದಪ್ಪ ಮುದ್ರಿತ ಕಥೆಪುಸ್ತಕಗಳನ್ನು ಓದಿಸಿ ಮತ್ತು ಭಾಷಾಭ್ಯಾಸ ಚಟುವಟಿಕೆಯನ್ನು ಮಕ್ಕಳಿಗೆ ಮಾಡಿಸುವರು. | | | | ಶಿಕ್ಷಕ | **<u>ಪುನರ್ಬಲನಾ ಚಟುವಟಿಕೆ :</u>**<br>ಸಂಚಾರಿ ನಿಯಮ ಪಾಲನೆಯನ್ನು ಅಭಿನಯದ ಮೂಲಕ ಮಕ್ಕಳು ನಿರೂಪಿಸಲು ಮಾರ್ಗದರ್ಶನ ನೀಡುತ್ತಾ ರೂಪಕವನ್ನು ಅಭಿನಯ ಮಾಡಿಸುವರು. |
| | 5 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಸಂಚಾರಿ ದೀಪಗಳ ಬಗ್ಗೆ ಬರೆಯಲು ತಿಳಿಸುವರು. |
| 2ನೇ | 10 ನಿ | ಗಣಿತ ಸಂಖ್ಯೆಗಳು | 1 ರಿಂದ 99ರವರೆಗಿನ ಸಂಖ್ಯೆಗಳನ್ನು ಏರಿಕೆ, ಇಳಿಕೆ, ಕ್ರಮದಲ್ಲಿ ಬರೆಯುವರು. | ಕಡ್ಡಿಗಳು, ಗೋಲಿಗಳು, ಮಿಂಚುಪಟ್ಟಿ, ಕಲ್ಲು ಹಲಗೆ, ಬೆಂಕಿ ಪೊಟ್ಟಣಗಳು. | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಯಾವುದಪ್ಪ ಚಿಕ್ಕದು ಯಾವುದಪ್ಪ ದೊಡ್ಡದು ಆಟ ಆಡಿಸುವರು. | ಗಣಿತ ಪೂರ್ಣಾಂಕಗಳು ಮತ್ತು ಸಂಖ್ಯಾ ಸೂಚಕಗಳು. | 100 ರಿಂದ 999ರ ಒಳಗಿರುವ 5 ಅಥವಾ 6 ಸಂಖ್ಯೆಗಳನ್ನು ಕ್ರಮಾಗತವಾಗಿ ಜೋಡಿಸಿ (ಏರಿಕೆ ಮತ್ತು ಇಳಿಕೆ ಕ್ರಮದಲ್ಲಿ) ಕೊಟ್ಟಾಗ ಬಿಟ್ಟು ಹೋಗಿರುವ ಸಂಖ್ಯೆಯನ್ನು ಪತ್ತೆ ಹಚ್ಚುವರು. | ಮಕ್ಕಳು ಮಿಂಚುಫಲಕ, ಮೇಜು, ಸ್ಲೇಟ್, ಕಾಗದದಲ್ಲಿ ತಯಾರಿಸಿದ ಸಂಖ್ಯಾ ಪಟ್ಟಿ | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** 2ನೆಯ ತರಗತಿಯ ಮಕ್ಕಳ ಜೊತೆಯಲ್ಲಿಯೇ ಈ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. |
| | 5 ನಿ | | | | | ಮುಂದಿನ ಚಟುವಟಿಕೆ ನಿರ್ವಹಿಸಲು ಹಿರೇಮಣಿಗೆ ಸೂಚಿಸುವರು. | | | | | ಮಕ್ಕಳು ಮುಂದಿನ ಚಟುವಟಿಕೆಗೆ ಅಣಿಗೊಳ್ಳುವರು. |
| | 25 ನಿ | | | | ಹಿರೇಮಣಿ | ಹಿಂದಿನ ಗಣಿತ ಅವಧಿಯ ಚಟುವಟಿಕೆಯನ್ನು ಮುಂದುವರೆಸುವರು. | | | | ಶಿಕ್ಷಕ | **<u>ಕಲಿಕಾಂಶ ಚಟುವಟಿಕೆ :</u>** ಪಠ್ಯಪುಸ್ತಕದಲ್ಲಿ ಪುಟಸಂಖ್ಯೆ 41ರಲ್ಲಿನ "ಫಲಕದಲ್ಲಿ ಬಿಟ್ಟು ಹೋದ ಸಂಖ್ಯೆ" "ಖಾಲಿ ನಿವೇಶನದ ಮನ ಸಂಖ್ಯೆ" "ಕಪಾಟಿನಲ್ಲಿ ಯಾವ ಸಂಖ್ಯೆಯ ಪುಸ್ತಕ ಇಲ್ಲ" ಚಟುವಟಿಕೆಗಳನ್ನು ಮಾಡಿಸುವರು. |
| | 10 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | ಶಿಕ್ಷಕ | ಹಿಂದಿನ ಅವಧಿಯ ಚಟುವಟಿಕೆಯನ್ನು ಮುಂದುವರಿಸಿಕೊಂಡು ಹೋಗಲು ಸೂಚಿಸುವರು. |
| | 25 ನಿ | | | | ಶಿಕ್ಷಕ | **<u>ಕಲಿಕಾಂಶ ಚಟುವಟಿಕೆ :</u>**<br><br>14 32 24 12<br>ಖಾಲಿ ಬೆಂಕಿ ಪೊಟ್ಟಣಗಳನ್ನು ಮೇಲ್ಕಂಡ ರೀತಿಯಲ್ಲಿ ಜೋಡಿಸಿ ಎಣಿಸಿ ಸಂಖ್ಯೆಗಳಲ್ಲಿ ಬರೆಸುವರು. ಅತಿ ಚಿಕ್ಕದು 12, ಅತಿ ದೊಡ್ಡದು 32<br>ಉಳಿದ ಸಂಖ್ಯೆಗಳು 14, 24, ಉಳಿದ ಸಂಖ್ಯೆಗಳಲ್ಲಿ ಚಿಕ್ಕದು 14, ದೊಡ್ಡದು 24<br>ಏರಿಕೆ ಕ್ರಮದಲ್ಲಿ ಬರೆಯುವಾಗ ಮೊದಲು ಕನಿಷ್ಠ ಸಂಖ್ಯೆ ಬರೆಸುವರು. [12] [ ] [ ] [ ] ನಂತರ ಕೊನೆಯಲ್ಲಿ ಗರಿಷ್ಠ ಸಂಖ್ಯೆ ಬರೆಸುವರು. [ ] [ ] [ ] [32]<br>ಉಳಿದ ಸಂಖ್ಯೆಗಳಲ್ಲಿ ಚಿಕ್ಕ ಸಂಖ್ಯೆಯನ್ನು ಮೊದಲು ಬರೆಯಿಸಿ ನಂತರ ದೊಡ್ಡ ಸಂಖ್ಯೆಯನ್ನು ಬರೆಸುವರು. [12] [14] [24] [32] | | | | ಹಿರೇಮಣಿ | ಪುಟಸಂಖ್ಯೆ 41ರಲ್ಲಿನ ಚಟುವಟಿಕೆಯನ್ನು ಮುಂದುವರಿಸುವರು |
| | 5 ನಿ | | | | | | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲನೆ ಮಾಡುವರು. |

**31ನೇ ದಿನ**



| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ: ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಮೂರನೇ ತರಗತಿ: ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 ನಿ | SUPW | ಕಾಗದದ ಮೇಲೆ ಶಾಯಿಯನ್ನು ಅಥವಾ ನೀರ್ ಬಣ್ಣವನ್ನು ಸಿಂಪಡಿಸಿ ಅಂದಗೊಳಿಸುವುದು. | ಕಾಗದ, ಬಣ್ಣಗಳು, ನೀರು, ಶಾಯಿ, ಬ್ರಷ್, ದಾರ ಇತರೆ | ಶಿಕ್ಷಕ | ಸಮವಾಗಿ ಮಡಿಸಿದ ಕಾಗದ ಒಂದು ಪಾರ್ಶ್ವದಲ್ಲಿ ಶಾಯಿ ಅಥವಾ ನೀರ್ ಬಣ್ಣ (water colours) ಸಿಂಪಡಿಸಿ ಬಣ್ಣ ಹಸಿಯಾಗಿರುವಾಗಲೇ ಕಾಗದ ಮಡಿಸಿ, ಒತ್ತಿ ಎರಡೂ ಕಡೆ ಅಂದವಾದ ಅಚ್ಚನ್ನು ಪಡೆಯುವರು.<br>* ಶಿಕ್ಷಕರು ಬಣ್ಣವನ್ನು ಮತ್ತು ಬಿಳಿಕಾಗದವನ್ನು ಮಕ್ಕಳಿಗೆ ಸರಬರಾಜ ಮಾಡುವರು.<br>* ಬಣ್ಣಗಳನ್ನು ಸಮವಸ್ತ್ರಕ್ಕೆ ಅಂಟಿಕೊಳ್ಳದಂತೆ ಎಚ್ಚರಿಕೆ ವಹಿಸುವಂತೆ, ಶಿಕ್ಷಕರು ಸೂಚನೆ, ಸಲಹೆ ಬಳಸುವ ಕ್ರಮವನ್ನು ತಿಳಿಸುವರು. | ಜೀವನ ಕೌಶಲ (ಲಲಿತ ಕಲೆ) | ಕಾಗದದ ಮೇಲೆ ಶಾಯಿಯನ್ನು ಅಥವಾ ನೀರ್ ಬಣ್ಣವನ್ನು ಸಿಂಪಡಿಸಿ ಅಂದಗೊಳಿಸುವುದು. | ಕಾಗದ ಮತ್ತು ಬಣ್ಣಗಳು | ಶಿಕ್ಷಕ | ಎರಡನೇ ತರಗತಿಯ ಮಕ್ಕಳು ಮಾಡಿದ ಚಟುವಟಿಕೆಯಲ್ಲಿ ಮೂರನೆಯ ತರಗತಿಯ ಮಕ್ಕಳು ಭಾಗವಹಿಸುವರು. |
| | 40 ನಿ | ಚಿನ್ನರ ಚುಕ್ಕಿ | | ರೇಡಿಯೋ ಕಪ್ಪು ಹಲಗೆ ನೀಲಿ ಸುಣ್ಣ | ಶಿಕ್ಷಕ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ | ಚಿನ್ನರ ಚುಕ್ಕಿ | | ರೇಡಿಯೋ ಕಪ್ಪು ಹಲಗೆ ನೀಲಿ ಸುಣ್ಣ | ಶಿಕ್ಷಕ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ |
| 4ನೇ | 10 ನಿ | ಪರಿಸರ ಅಧ್ಯಯನ ಜೀವ ಸಂಚಾರ | ಪ್ರಕೃತಿಯ ಸೌಂದರ್ಯವನ್ನು ಮೆಚ್ಚುವರು ಪ್ರಾಣಿಗಳ ಮನೆಗಳನ್ನು ಗುರ್ತಿಸುವರು. | ಮೌಖಿಕವಾಗಿ ಕೇಳಲು ಕಲಿಯು ಚಿತ್ರಪಟಗಳು | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>**<br>ಮಂಗನ ಮದುವೆ ಪದ್ಯ ಹಾಡಿಸುವರು. | ಪರಿಸರ ಅಧ್ಯಯನ ಪ್ರಾಣಿಪ್ರಪಂಚ | ಪ್ರಾಣಿಗಳ ವಾಸಸ್ಥಳ, ದೇಹದಾಕೃತಿ, ಆಕಾರಗಳನ್ನು ಗುರ್ತಿಸುವರು. ಪ್ರಾಣಿಗಳ ಆಹಾರಾಭ್ಯಾಸಗಳನ್ನು ತಿಳಿಯುವರು. ಪ್ರಾಣಿಗಳ ಆಹಾರಾಭ್ಯಾಸದ ಮೇಲೆ ವಿಂಗಡಿಸುವುದು. ಮಾನವರಿಗೂ ಪ್ರಾಣಿಗಳಿಗೂ ಇರುವ ಹೋಲಿಕೆ ವ್ಯತ್ಯಾಸವನ್ನು ತಿಳಿಯುವರು. | | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>**<br>ಎರಡನೇ ತರಗತಿಯ ಮಕ್ಕಳು ಮಾಡಿದ ಚಟುವಟಿಕೆಯಲ್ಲಿ ಮೂರನೆಯ ತರಗತಿಯ ಮಕ್ಕಳು ಭಾಗವಹಿಸುವರು. |
| | 5 ನಿ | | | | | ಮುಂದಿನ ಚಟುವಟಿಕೆ ಮಾಡಿಸಲು ಹಿರೇಮಣಿಗೆ ಮಾರ್ಗದರ್ಶನ ನೀಡುವರು. | | | | | ಮುಂದಿನ ಅವಧಿಗೆ ಸಿದ್ಧತೆ ಮಾಡಿಕೊಳ್ಳುವರು. |
| | 25 ನಿ | | | | ಹಿರೇಮಣಿ | ಪರಿಸರದ ಚಿತ್ರ ಬರೆಯಲು ಹೇಳುವರು. | | | ಪಠ್ಯಪುಸ್ತಕ | ಶಿಕ್ಷಕ | **<u>ಪುನರ್ಬಲನ ಚಟುವಟಿಕೆ :</u>**<br>ಪುಟ ಸಂಖ್ಯೆ 24ರಲ್ಲಿರುವ ಈ ಚಟುವಟಿಕೆ ಮಾಡುಸುವರು. |
| | 10 ನಿ | | | | ಶಿಕ್ಷಕ | ಮಕ್ಕಳು ಮಾಡಿರುವ ಚಟುವಟಿಕೆಯನ್ನು ಪರಿಶೀಲನೆ ಮಾಡುವರು. | | | | ಶಿಕ್ಷಕ | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | **<u>ಪುನರ್ಬಲನ ಚಟುವಟಿಕೆ :</u>** ಪರಿಸರದಲ್ಲಿ ನೀನು ನೋಡಿರುವ ನಿನಗೆ ಇಷ್ಟವಾದ ಯಾವುದಾದರು ಒಂದು ಅಂಶದ ಬಗ್ಗೆ (ಬೆಟ್ಟ, ತೋಟ, ಮರ, ನದಿ, ಹುತ್ತ, ವನ) ಒಂದೆರೆಡು ವಾಕ್ಯಗಳಲ್ಲಿ ಬರೆಸುವರು ಹಾಗೂ ಮೌಖಿಕ ವಾಗಿ ಪ್ರಶ್ನೆಗಳ ಮೂಲಕ ಉತ್ತರ ಪಡೆಯುತ್ತಾ ಚಟುವಟಿಕೆ ಮಾಡಿಸುವರು. | | | ಪಠ್ಯಪುಸ್ತಕ | ಹಿರೇಮಣಿ | ಪುಟ 24ರಲ್ಲಿರುವ <u>ಆಟ ಆಡಲು</u> ಚಟುವಟಿಕೆಯನ್ನು ಮಾಡಿಸಲು ಹಿರೇಮಣಿಗೆ ಹೇಳುವರು. ಹಿರೇಮಣಿಯು ಶಿಕ್ಷಕರ ಮಾರ್ಗದರ್ಶನದಂತೆ ಆಟವನ್ನು ಆಡಿಸುವರು. |
| | 5 ನಿ | | | | | ಮೀನಿನ ಅಂದವಾದ ಚಿತ್ರ ಬರೆದು ಬಣ್ಣ ಹಚ್ಚಲು ತಿಳಿಸುವರು. | | | | | ಮಕ್ಕಳು ಮಾಡಿದ ಚಟುವಟಿಕೆಯ ಪರಿಶೀಲನೆ ಮಾಡುವರು. |

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ ಲಿಟ್ಟಿಯ ಮುಟ್ಟಿಗೆ ಬೋಡಿ | ಪ್ರಾಶಿಯಲ್ಲಿ ಇಲ್ಲ ಒತ್ತಕ್ಷರಗಳನ್ನು ಉಚ್ಚರಿಸುವರು. ವರ್ಣಮಾಲೆಯ ಉಪಯೋಗಿಸುವ ಅಕ್ಷರ ಮತ್ತು ಸಂಯುಕ್ತಾಕ್ಷರ ಮತ್ತು ಗಳನ್ನು ಗುರುತಿಸುವರು. ಸಂಯುಕ್ತಾಕ್ಷರ ಪದ ವಾಕ್ಯಗಳನ್ನು ನಕಲು ಮಾಡುವರು. | ಪದ್ಯದ ಚಾರ್ಟ್ ಪುಸ್ತಕ | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಕಠ್ರಗಿರುವ ಕಾಗೆಯೊಂದು ಸರ್ರೆಂದು ಮೇಲೆ ಹಾರಿ, ಭರ್ರೆಂದು ಗಗನಕ್ಕೇರಿ, ಗಿರ್ರೆಂದು ಸುತ್ತು ಹಾಕಿ, ಜರ್ರೆಂದು ಇಳಿಯುವಾಗ, ಪರ್ರೆಂದು ರೆಕ್ಕೆ ಮುರಿದು, ಕಿರ್ರೆಂದು ಕೂಗಿಕೊಂಡು, ಡರೆಂದು ಕೆಳಗೆ ಬಿದ್ದಿತು. ಈ ಅಭಿನಯ ಗೀತೆಯನ್ನು ಹಾಡಿಸುವರು. | ಕನ್ನಡ ನಿಯಮ ಪಾಲನೆ | ರಸ್ತೆಯ ಚಿಹ್ನೆ ಮತ್ತು ಸೂಚನಾ ಫಲಕಗಳಲ್ಲಿ ಸೂಚನೆಗಳನ್ನು ಓದುವರು. | ಪುಸ್ತಕ ಸಂಚಾರಿ ನಿಯಮಗಳ ಚಿತ್ರ ಮತ್ತು ಸೂಚನಾ ಫಲಕ. | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** 2ನೇ ತರಗತಿಯ ಮಕ್ಕಳೊಂದಿಗೆ 3ನೇ ತರಗತಿಯ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. |
| | 5 ನಿ | | | | | ಮುಂದಿನ ಚಟುವಟಿಕೆಗೆ ಸಿದ್ಧಗೊಳಿಸುವರು. | | | | | ಶಿಕ್ಷಕಿಯು ಹಿರೇಮಣಿಯ ಸಹಾಯದಿಂದ ಪಾಠವನ್ನು ಓದಿಸಲು ಸೂಚಿಸುವುದು. |
| | 25 ನಿ | | | | ಶಿಕ್ಷಕ | **<u>ಕಲಿಕಾಂಶ ಚಟುವಟಿಕೆ :</u>** ಒತ್ತಕ್ಷರಗಳಿರುವ ಪ್ರಾಸಪದ್ಯಗಳನ್ನು ಹೇಳಿಕೊಟ್ಟು, ಕಪ್ಪುಹಲಗೆಯ ಮೇಲೆ ಬರೆದು ಮಕ್ಕಳಿಂದ ಓದಿಸುವರು. | | | | ಹಿರೇ ಮಣಿ | ಹಿರೇಮಣಿಯ ಸಹಾಯದಿಂದ ಪಾಠವನ್ನು ವಿದ್ಯಾರ್ಥಿಗಳು ಓದುವರು. |
| | 10 ನಿ | | | | | ಶಿಕ್ಷಕರು ಹಿರೇಮಣಿಗೆ ಕಪ್ಪುಹಲಗೆಯಲ್ಲಿ ಬರೆದ ಪ್ರಾಸಪದ್ಯಗಳನ್ನು ಬರೆಯಲು ಸೂಚನೆ ನೀಡುವರು. | | | | | ಮಕ್ಕಳು ಓದುತ್ತಿರುವುದನ್ನು ಗಮನಿಸುವರು. |
| | 25 ನಿ | | | | ಹಿರೇ ಮಣಿ | ಹಿರೇಮಣಿಯ ಸಹಾಯದಿಂದ ಮೇಲಿನ ಚಟುವಟಿಕೆಯನ್ನು ಮಕ್ಕಳು ಮಾಡುವರು. | | | | ಶಿಕ್ಷಕ | **<u>ಕಲಿಕಾಂಶ ಚಟುವಟಿಕೆ :</u>** ಸಂಚಾರಿ ನಿಯಮಗಳನ್ನು ಸೂಚಿಸುವ ಚಿತ್ರ ಮತ್ತು ಸೂಚನಾ ಫಲಕಗಳನ್ನು ತೂಗು ಹಾಕಿ ಮಕ್ಕಳಿಂದ ಓದಿಸುವರು. |
| | 5 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಸಂಚಾರಿ ನಿಯಮಗಳನ್ನು ಬರೆಯಲು ತಿಳಿಸುವರು. |
| 2ನೇ | 10 ನಿ | ಗಣಿತ ಸಂಖ್ಯೆಗಳು | 1 ರಿಂದ 99ರವರೆಗಿನ ಸಂಖ್ಯೆಗಳನ್ನು ಏರಿಕೆ, ಇಳಿಕೆ ಕ್ರಮದಲ್ಲಿ ಬರೆಯುವರು. | ಕಡ್ಡಿಗಳು, ಗೋಲಿಗಳು, ಮಣಿಪಟ್ಟಿ, ಕಪ್ಪುಹಲಗೆ, ಬೆಂಕಿಪೊಟ್ಟಣಗಳು. | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಹೆಣ್ಣು ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಅದರಲ್ಲಿ ಉದ್ದ ಜಡೆಯವರು ಮತ್ತು ಗಿಡ್ಡ ಜಡೆಯವರೆಂದು ವರ್ಗೀಕರಿಸಿ, ಉದ್ದ ಮತ್ತು ಗಿಡ್ಡ ಜಡೆಯವರು ಎಷ್ಟು ಮಂದಿಯಿದ್ದಾರೆಂದು ಪಟ್ಟಿ ಮಾಡಿಸುವರು. | ಗಣಿತ ಸ್ಥಾನಾಂಕಗಳು ಮತ್ತು ಸಂಖ್ಯಾ ಸೂಚಕಗಳು. | 100 ರಿಂದ 999ರ ಒಳಗಿರುವ 5 ಅಥವಾ 6 ಸಂಖ್ಯೆಗಳನ್ನು ಕ್ರಮಾಗತವಾಗಿ ಜೋಡಿಸಿ (ಏರಿಕೆ ಮತ್ತು ಇಳಿಕೆ ಕ್ರಮದಲ್ಲಿ) ಕೊಟ್ಟಾಗ ಬಿಟ್ಟು ಹೋಗಿರುವ ಸಂಖ್ಯೆಯನ್ನು ಪತ್ತೆ ಹಚ್ಚುವರು. | ಮಕ್ಕಳು ಮಣಿಫಲಕ, ಮೇಜು, ಸ್ಲೇಟ್, ಕಾಗದದಲ್ಲಿ ತಯಾರಿಸಿದ ಸಂಖ್ಯಾಪಟ್ಟಿ | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** 2ನೇ ತರಗತಿಯ ಮಕ್ಕಳ ಜೊತೆಯಲ್ಲಿಯೇ ಈ ಮಕ್ಕಳಿಗೂ ಪೂ.ಸಿ.ಚ.ಯಲ್ಲಿ ತೊಡಗಿಸಿಕೊಳ್ಳುವರು. |
| | 5 ನಿ | | | | | ಹಿಂದಿನ ಗಣಿತದ ಅವಧಿಯ ಚಟುವಟಿಕೆ ನಿರ್ವಹಿಸಲು ಸೂಚನೆ ನೀಡುವರು. | | | | | ಮಕ್ಕಳು ಮುಂದಿನ ಚಟುವಟಿಕೆಗೆ ಅಣಿಗೊಳಿಸುವರು. |
| | 25 ನಿ | | | | ಹಿರೇಮಣಿ | ಹಿಂದಿನ ಗಣಿತ ಅವಧಿಯ ಚಟುವಟಿಕೆಯನ್ನು ಮುಂದುವರೆಸಿಕೊಂಡು ಹೋಗುವರು. | | | | ಶಿಕ್ಷಕ | **<u>ಕಲಿಕಾಂಶ ಚಟುವಟಿಕೆ :</u>** ನಾಲ್ಕು ಮಕ್ಕಳಿಗೆ 3 ಅಂಕೆಗಳಿರುವ ಸಂಖ್ಯಾಫಲಕಗಳನ್ನು ಕೊಟ್ಟು, ಅತಿ ಚಿಕ್ಕ ಸಂಖ್ಯಾಫಲಕವಿರುವ ಮಗು ಮೊದಲು, ಅತಿ ದೊಡ್ಡ ಸಂಖ್ಯಾಫಲಕವಿರುವ ಮಗು ಕೊನೆಯಲ್ಲಿ ನಿಲ್ಲುವಂತೆ ಸೂಚಿಸುವುದು. ಉಳಿದ ಎರಡು ಸಂಖ್ಯಾಫಲಕವಿರುವ ಮಕ್ಕಳಲ್ಲಿ ಕನಿಷ್ಠ ಮತ್ತು ಗರಿಷ್ಠ ಸಂಖ್ಯೆಯನ್ನು ಗುರುತಿಸುವುದು. ಈ ಮಕ್ಕಳನ್ನು ಕನಿಷ್ಠ ಸಂಖ್ಯೆ ಹೊಂದಿರುವ ಮಗುವನ್ನು ಅತಿ ಚಿಕ್ಕ ಸಂಖ್ಯಾಫಲಕ ಹೊಂದಿರುವ ಮಗುವಿನ ನಂತರ, ದೊಡ್ಡ ಸಂಖ್ಯೆ ಹೊಂದಿರುವ ಮಗುವನ್ನು ಅತಿ ದೊಡ್ಡ ಸಂಖ್ಯೆ ಹೊಂದಿರುವ ಮಗುವಿಗೆ ಮೊದಲು ನಿಲ್ಲಿಸುವರು, ನಂತರ ಕನಿಷ್ಠ ಸಂಖ್ಯೆ ಮತ್ತು ಗರಿಷ್ಠ ಸಂಖ್ಯೆಯನ್ನು ಕಪ್ಪುಹಲಗೆಯ ಮೇಲೆ ಬರೆಸುವರು. |
| | 10 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಮೇಲಿನ ಚಟುವಟಿಕೆಯನ್ನು ಮುಂದುವರೆಸಿಕೊಂಡು ಹೋಗಲು ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | ಪ.ಪು. ಪುಟ ಸಂಖ್ಯೆ 49ರಲ್ಲಿನ ಚಟುವಟಿಕೆಯನ್ನು ಮಾಡಿಸುವರು. | | | | ಹಿರೇ ಮಣಿ | ಮಕ್ಕಳು ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 5 ನಿ | | | | | | | | | | ಮೇಲಿನ ಚಟುವಟಿಕೆಯನ್ನು ಪರಿಶೀಲನೆ ಮಾಡುವರು. |